ST ALOYSIUS
(DEEMED TO BE UNIVERSITY)
MANGALURU, KARNATAKA 575003 - INDIA
ESTD : 1880

# NEWS CLIPPINGS

**-Media Coverage Archive-**

## 01-06-2026 TO 30-06-2026

*Kannadaprabha 10-06-2026*

# ಕನ್ನಡ ಎಂ.ಎ.ಗೆ ಅಲೋಶಿಯಸ್ ಪರಿಗಣಿತ ವಿವಿ ನೂತನ ಸ್ವರೂಪ

## ಜೆಎನ್ ಜಿ ತಲೆಮಾರಿಗೆ ಉದ್ಯೋಗಾವಕಾಶದ ಕನ್ನಡ ಹೊಸ ಕೋರ್ಸ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ಶತಮಾನದ ಕಾಲದಿಂದ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಕನ್ನಡ ಎಂ.ಎ. ಸ್ವರೂಪಕ್ಕೆ ಮಂಗಳೂರು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯ ಅತ್ಯಾಧುನಿಕ ಸ್ಪರ್ಶದೊಂದಿಗೆ ವಿಶಿಷ್ಟ ವಿನ್ಯಾಸ ನೀಡಿದೆ. ಆಧುನಿಕ ಡಿಜಿಟಲ್ ಲೋಕದ ವಿವಿಧ ತಾಂತ್ರಿಕ ವಿಷಯಗಳು ಮತ್ತು ಇಂದಿನ ಉದ್ಯೋಗಸ್ನೇಹಿ ಕ್ಷೇತ್ರಗಳ ವಿಷಯಗಳನ್ನು ಕನ್ನಡಕ್ಕೆ ಸೇರಿಸಿ ಇಂದಿನ ಕನ್ನಡ ಜೆನ್ ಜಿ ತಲೆಮಾರಿಗೆ ಕನ್ನಡದ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಪ್ರಯತ್ನವನ್ನು ಸಂತ ಅಲೋಶಿಯಸ್ ಮಾಡಿದೆ.

ಡಿಜಿಟಲ್ ಸಂವಹನ, ಹಿರಿತೆರೆ - ಕಿರಿತೆರೆ ಸಹಿತ ಎಲ್ಲ ಬಗೆಯ ಮನೋರಂಜನಾ ಉದ್ಯಮ, ಮಾಧ್ಯಮ, ಅನುವಾದ ಉದ್ಯಮ, ಕೃತಕ ಬುದ್ಧಿಮತ್ತೆ, ಪ್ರಾಂಪ್ಟ್ ಎಂಜಿನಿಯರಿಂಗ್, ಕಂಟೆಂಟ್ ಬರವಣಿಗೆ, ಸ್ಕ್ರಿಪ್ಟ್ ರಚನೆ, ಜಾಹೀರಾತು ಉದ್ಯಮ, ವೇದಿಕೆ ನಿರ್ವಹಣೆ ಮೊದಲಾದ ಕ್ಷೇತ್ರಗಳಲ್ಲಿರುವ ಉದ್ಯೋಗಾವಕಾಶಗಳಿಗೆ ಕನ್ನಡದ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು ಈ ಹೊಸ ಬಗೆಯ ಕನ್ನಡ ಎಂ.ಎ. ಮುಖ್ಯ ಉದ್ದೇಶ.

ಕೆಎಎಸ್, ಐಎಎಸ್ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ಎಲ್ಲ ಬಗೆಯ ಕನ್ನಡ ಸಾಹಿತ್ಯ, ಸಾಹಿತ್ಯ ಚರಿತ್ರೆ, ವಿಮರ್ಶೆ, ಜಾನಪದ, ಕಾವ್ಯಮೀಮಾಂಸೆ ಮೊದಲಾದ ಸಂಪ್ರಾದಾಯಿಕ ವಿಷಯಗಳನ್ನೂ ಅವುಗಳ ಪತ್ಯಗಳನ್ನೂ ಈ ಕೋರ್ಸಿನಲ್ಲಿ ಯಥಾವತ್ತಾಗಿ ಅಳವಡಿಸಿರುವುದರಿಂದ ಎಂಎ ಪದವಿ ಮುಗಿಸುವ ಹೊತ್ತಿಗೆ ವಿದ್ಯಾರ್ಥಿಗಳು ಉನ್ನತ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಾಗಿರುತ್ತಾರೆ.

ಅಧ್ಯಾಪನ ವೃತ್ತಿಯ ಅವಕಾಶಕ್ಕೆ ಕೊರತೆಯಾಗದಂತೆ, ಅತ್ಯಾಧುನಿಕ ವಿಚಾರಗಳು ಮರೆಯಾಗದಂತೆ ಎಲ್ಲವನ್ನು ಬೆಸೆದು ಎಚ್ಚರದಿಂದ ಪತ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಪತ್ಯಕ್ರಮದ ತಯಾರಿಯ ಸಂದರ್ಭದಲ್ಲಿ ಬೆಂಗಳೂರು ಮತ್ತು ಮೈಸೂರಿನ ಕನ್ನಡ ಡಿಜಿಟಲ್ ಸಂವಹನ ಪರಿಣತರನ್ನು, ಮನೋರಂಜನಾ ಉದ್ಯಮ ತಜ್ಞರನ್ನು, ಕನ್ನಡದ ಬೆಳವಣಿಗೆಯ ಕಾಳಜಿಯುಳ್ಳ ಸಾಹಿತ್ಯವಿಮರ್ಶಕರನ್ನು ಒಳಗೊಂಡ ಅಧ್ಯಯನ ಮಂಡಳಿಯ ಮಾರ್ಗದರ್ಶನ ಮತ್ತು ತಾಂತ್ರಿಕ ಸಹಾಯವನ್ನು ಪಡೆಯಲಾಗಿದೆ. ಇದೇ ಶೈಕ್ಷಣಿಕ ವರ್ಷ (2026-27) ದಿಂದ ಆರಂಭವಾಗುವ ಈ ಕನ್ನಡ ಎಂ.ಎ. ಕೋರ್ಸು ಕನ್ನಡ ನಾಡಿಗೆ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ವಿನೂತನ ಕೊಡುಗೆಯೆಂದು ವಿಶ್ವವಿದ್ಯಾನಿಲಯದ ಕುಲಪತಿ ರೆ.ಡಾ. ಪ್ರವೀಣ್ ಮಾರ್ಟಿಸ್ ಎಸ್. ಜೆ. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*Varthabharathi 12-06-2026*

# ಕನ್ನಡ ಎಂಎಗೆ ಅಲೋಶಿಯಸ್ ವಿವಿಯಿಂದ ಹೊಸ ಸ್ವರೂಪ

ಮಂಗಳೂರು, ಜೂ.11: ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಕನ್ನಡ ಎಂಎಗೆ ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯವು ಹೊಸ ಸ್ವರೂಪ ನೀಡಿದೆ. ಆಧುನಿಕ ಡಿಜಿಟಲ್ ಲೋಕದ ವಿವಿಧ ತಾಂತ್ರಿಕ ವಿಷಯಗಳು ಮತ್ತು ಇಂದಿನ ಉದ್ಯೋಗ ಸ್ನೇಹಿ ಕ್ಷೇತ್ರಗಳ ವಿಷಯಗಳನ್ನು ಕನ್ನಡಕ್ಕೆ ಸೇರಿಸಿ ಕನ್ನಡ ಝೆನ್ ಜಿ ತಲೆಮಾರಿಗೆ ಕನ್ನಡದ ಉದ್ಯೋಗಾವಕಾಶವನ್ನು ಹೆಚ್ಚಿಸುವ ಪ್ರಯತ್ನ ಮಾಡಲಾಗಿದೆ ಎಂದು ಸಂತ ಅಲೋಶಿಯಸ್ ವಿವಿ ಪ್ರಕಟನೆಯಲ್ಲಿ ತಿಳಿಸಿದೆ.

ಡಿಜಿಟಲ್ ಸಂವಹನ, ಹಿರಿತೆರೆ- ಕಿರಿತೆರೆ ಸಹಿತ ಎಲ್ಲ ಬಗೆಯ ಮನೋರಂಜನಾ ಉದ್ಯಮ, ಮಾಧ್ಯಮ, ಅನುವಾದ ಉದ್ಯಮ, ಕೃತಕ ಬುದ್ಧಿಮತ್ತೆ, ಪ್ರಾಂಪ್ಟ್ ಇಂಜಿನಿಯರಿಂಗ್, ಕಂಟೆಂಟ್ ಬರವಣಿಗೆ, ಸ್ಕ್ರಿಪ್ಟ್ ರಚನೆ, ಜಾಹೀರಾತು ಉದ್ಯಮ, ವೇದಿಕೆ ನಿರ್ವಹಣೆ ಮೊದಲಾದ ಕ್ಷೇತ್ರಗಳಲ್ಲಿರುವ ಉದ್ಯೋಗಾವಕಾಶಗಳಿಗೆ ಕನ್ನಡದ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು ಈ ಹೊಸ ಕನ್ನಡ ಎಂಎಯ ಮುಖ್ಯ ಉದ್ದೇಶ ಎಂದು ಅಲೋಶಿಯಸ್ ವಿವಿಯ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕೆಎಎಸ್, ಐಎಎಸ್ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ಕನ್ನಡ ಸಾಹಿತ್ಯ, ಚರಿತ್ರೆ, ವಿಮರ್ಶೆ, ಜಾನಪದ, ಕಾವ್ಯ ಮೀಮಾಂಸೆ ಮೊದಲಾದ ಸಾಂಪ್ರದಾಯಿಕ ವಿಷಯಗಳನ್ನೂ ಅವುಗಳ ಪಠ್ಯಗಳನ್ನೂ ಈ ಕೋರ್ಸ್‌ನಲ್ಲಿ ಯಥಾವತ್ತಾಗಿ ಅಳವಡಿಸಿರುವುದರಿಂದ ಎಂಎ ಪದವಿ ಮುಗಿಸುವ ವೇಳೆ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಾಗಿರುತ್ತಾರೆ. ಅಧ್ಯಾಪನ ವೃತ್ತಿಯ ಅವಕಾಶಕ್ಕೆ ಕೊರತೆಯಾಗದಂತೆ ಅತ್ಯಾಧುನಿಕ ವಿಚಾರಗಳು ಮರೆಯಾಗದಂತೆ ಎಲ್ಲವನ್ನು ಬೆಸೆದು ಎಚ್ಚರದಿಂದ ಪಠ್ಯಕ್ರಮ ಸಿದ್ಧಪಡಿಸಲಾಗಿದೆ. ಪಠ್ಯಕ್ರಮ ತಯಾರಿಯ ಸಂದರ್ಭದಲ್ಲಿ ಬೆಂಗಳೂರು ಮತ್ತು ಮೈಸೂರಿನ ಕನ್ನಡ ಡಿಜಿಟಲ್ ಸಂವಹನ ಪರಿಣಿತರನ್ನು, ಮನೋರಂಜನಾ ಉದ್ಯಮ ತಜ್ಞರನ್ನು, ಕನ್ನಡ ಬೆಳವಣಿಗೆಯ ಕಾಳಜಿಯುಳ್ಳ ಸಾಹಿತ್ಯ ವಿಮರ್ಶಕರನ್ನು ಒಳಗೊಂಡ ಅಧ್ಯಯನ ಮಂಡಳಿಯ ಮಾರ್ಗದರ್ಶನ ಮತ್ತು ತಾಂತ್ರಿಕ ಸಹಾಯ ಪಡೆಯಲಾಗಿದೆ. ಈ ಶೈಕ್ಷಣಿಕ ವರ್ಷದಿಂದ (2026-2027) ಆರಂಭವಾಗುವ ಈ ಕನ್ನಡ ಎಂಎ ಕೋರ್ಸ್ ಕನ್ನಡ ನಾಡಿಗೆ ಸಂತ ಅಲೋಶಿಯಸ್ ಪರಿಗಣಿತ ವಿವಿಯ ವಿನೂತನ ಕೊಡುಗೆ ಎಂದು ರೆ.ಡಾ.ಪ್ರವೀಣ್ ಮಾರ್ಟಿಸ್ ತಿಳಿಸಿದ್ದಾರೆ.

*Udayavani 10-06-2026*

# ಕವಿತೆ ಕಟ್ಟುವ ರೀತಿ ಬದಲಾಗಿದೆ: ಡಾ| ಮಾಡ್ತ



**ಮಹಾನಗರ, ಜೂ. 9:** ಕೊಂಕಣಿ ಲೇಖಕ, ಕವಿ ಅವಿಲ್ ರಸ್ಕೀನ್ಹಾ ಅವರ ಪ್ರಥಮ ಕನ್ನಡ ಕವನ ಸಂಕಲನ ಬಣ್ಣಗಳ ಚಿತ್ತಾರ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಮಂಗಳೂರಿನ ಎಂ.ಸಿ.ಸಿ. ಬ್ಯಾಂಕ್ ಸಭಾಂಗಣದಲ್ಲಿ ನಡೆಯಿತು.

ಪುಸ್ತಕ ಬಿಡುಗಡೆಗೊಳಿಸಿದ ಹಿರಿಯ ಬರಹಗಾರ ವಂ| ಪ್ರಶಾಂತ್ ಮಾಡ್ತಾ ಅವರು ಮಾತನಾಡಿ, ಕವಿತೆಗಳನ್ನು ರಚಿಸುವ ವಿಧಾನ ಇಂದು ಬದಲಾಗಿದೆ. ದಶಕಗಳ ಹಿಂದೆ ಪ್ರಾಸ ಮತ್ತು ಅಲಂಕಾರಕ್ಕೆ ಹೆಚ್ಚು ಮಹತ್ವ ಕೊಡಲಾಗುತ್ತಿತ್ತು. ಆದರೆ ಇತ್ತೀಚೆಗೆ ಭಾವನೆ ಮತ್ತು ವಿಚಾರ ಓದುಗರಿಗೆ ಮನದಟ್ಟಾಗುವ ರೀತಿಯಲ್ಲಿ, ಹೃದಯ ಸ್ಪರ್ಶಿಸುವ ರೀತಿಯಲ್ಲಿ ಪ್ರತಿಪಾದಿಸುವುದಕ್ಕೆ ಹೆಚ್ಚು ಮಹತ್ವ ಕೊಡಲಾಗುತ್ತದೆ. ಇದು ಸ್ವಾಗತಾರ್ಹ ಬದಲಾವಣೆ ಎಂದರು. ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ| ಎಂ.ಪಿ. ಶ್ರೀನಾಥ್ ಅವರು ಮಾತನಾಡಿ, ಬಣ್ಣಗಳ ಚಿತ್ತಾರ ಕವನ ಸಂಕಲನದಲ್ಲಿ ಓದುಗರ ಮನ ಸೆಳೆಯುವ ಅನೇಕ ಕವಿತೆಗಳು ಇವೆ. ಇಂದಿನ ಯುವಜನತೆ ಸಾಹಿತ್ಯದ ಒಲವು ಹೆಚ್ಚಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಟ್ಯಾನಿ ಆಲ್ವಾರಿಸ್ ಮತ್ತು ಎಂ.ಸಿ.ಸಿ. ಬ್ಯಾಂಕಿನ ಅಧ್ಯಕ್ಷ ಅನಿಲ್ ಲೋಬೊ ಅವರು ಶುಭ ಹಾರೈಸಿದರು.

ಮಾರಿಯೆಟ್ ರಸ್ಕೀನ್ಹಾ ವಂದಿಸಿದರು. ಜಿಯೊ ಆಗ್ರಾರ್ ನಿರೂಪಿಸಿದರು. ಫೆಲ್ಸಿ ಲೋಬೊ ಪುಸ್ತಕ ಪರಿಚಯಿಸಿದರು. ಮೆಲಿಶಾ ಫೆರ್ನಾಂಡಿಸ್ ಸಹಕರಿಸಿದರು.

*Udayavani 11-06-2026*

# ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜು



**ಕೊಡಿಯಾಲಬೈಲು, ಜೂ. 10:** ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನಲ್ಲಿ ಮೌಲ್ಯ ಶಿಕ್ಷಣ ಹಾಗೂ ವಿಶ್ವ ಪರಿಸರ ದಿನದ ಅಂಗವಾಗಿ ನಮ್ಮ ಕರಾವಳಿ ಪರಿಸರ ವ್ಯವಸ್ಥೆಗಳು – ಸಸ್ಯ ಮತ್ತು ಪ್ರಾಣಿಗಳ ಸಂರಕ್ಷಣೆ' ಎಂಬ ವಿಷಯದ ಕುರಿತು ಜಾಗೃತಿ ಉಪ ನ್ಯಾಸವನ್ನು ಕಾಲೇಜಿನ ಲೊಯೊಲಾ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಗ್ಲ್ಯಾವಿನ್ ಥೋಮಸ್ ರೊಡ್ರಿಗಸ್ ಮಾಹಿತಿ ನೀಡಿ, ಕರಾವಳಿಯಲ್ಲಿ ಪರಿಸರದ ವಿವಿಧ ಘಟಕಗಳ ನಡುವೆ ಪರಸ್ಪರ ಸಂಬಂಧವಿದ್ದು ಮುಂದಿನ ಪೀಳಿಗೆಗಾಗಿ ಅವುಗಳನ್ನು ಸಂರಕ್ಷಿಸುವ ಅಗತ್ಯವಿದೆ. ಕಾಂಡ್ಲಾ ಪರಿಸರ ವ್ಯವಸ್ಥೆಗಳು ಭೂಮಿಯ ಮೇಲಿನ ಅತ್ಯಂತ ಉತ್ಪಾದಕ ಮತ್ತು ಪ್ರಮುಖವಾದ ಆವಾಸಸ್ಥಾನಗಳು. ಇವುಗಳು ವಿವಿಧ ರೀತಿಯ ಜಲಚರ ಪ್ರಭೇದಗಳಿಗೆ ಆಶ್ರಯ ಮತ್ತು ಸಂತಾನೋತ್ಪತ್ತಿಗಾಗಿ ಸ್ಥಳಗಳನ್ನು ಒದಗಿಸುವ ಜತೆಗೆ ಸವೆತ, ಬಿರುಗಾಳಿಗಳು ಮತ್ತು ಉಬ್ಬರವಿಳಿತಗಳ ವಿರುದ್ಧ ನೈಸರ್ಗಿಕ ಕವಚವಾಗಿ ಕಾರ್ಯ ನಿರ್ವಹಿಸುತ್ತವೆ ಎಂದರು.

Udayavani 11-06-2026

# ಅಲೋಶಿಯಸ್ ಪ. ಪೂ.ಕಾಲೇಜು: ಉಪನ್ಯಾಸ
# ವಿದ್ಯಾರ್ಥಿಗಳು ಸಾಮರ್ಥ್ಯದಲ್ಲಿ ನಂಬಿಕೆ ಇರಿಸಿ



**ಮಹಾನಗರ, ಜೂ. 10:** ವಿದ್ಯಾರ್ಥಿಗಳಲ್ಲಿ ಮೌಲ್ಯ ಮತ್ತು ಜೀವನ ಕೌಶಲ್ಯ ಪ್ರಗತಿಗಾಗಿ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಪಿಎ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ| ಸರ್ಫರಾಜ್ ಜೆ. ಹಾಸಿಮ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಡಬೇಕು. ಆಲೋಚನೆಗಳು, ವರ್ತನೆಗಳು ಮತ್ತು ಆತ್ಮ ವಿಶ್ವಾಸವು ಯಶಸ್ಸಿನ ಮೇಲೆ ಪ್ರಭಾವ ಬೀರುತ್ತವೆ ಎಂದರು. ವಿವಿಯ ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ| ಮೋನಾ ಮೆಂಡೋನ್ಸ ಅವರು ಡಿಜಿಟಲ್ ಯುಗದ ಅವಕಾಶಗಳು ಮತ್ತು ಸವಾಲುಗಳ ಬಗ್ಗೆ ಮಾತನಾಡಿ, ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆಯನ್ನು ಜವಾಬ್ದಾರಿಯುತವಾಗಿ ಬಳಸಬೇಕು. ಸ್ವಂತಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಶೈಕ್ಷಣಿಕ ಪ್ರಾಮಾಣಿಕತೆ ಅಗತ್ಯ. ತಂತ್ರಜ್ಞಾನವನ್ನು ಕಲಿಕೆಯ ಸಾಧನವಾಗಿ ಬಳಸಬೇಕು ಎಂದರು.

ಡಾ| ಪ್ರೀತಿ ಕೀರ್ತಿ ಡಿ'ಸೋಜಾ ಅವರು ಮಾತನಾಡಿದರು. ಸಂತ ಅಲೋಶಿಯಸ್ ಪರಿಗಣಿತ ವಿಶ್ವ ವಿದ್ಯಾನಿಲಯದ ಸೋಶಿಯಲ್ ವರ್ಕ್ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥೆ ಡಾ| ವಿದ್ಯಾ ವಿನುತಾ ಡಿ'ಸೋಜಾ ಮಾತನಾಡಿದರು.

ಸ್ವಸ್ತಿಕ ನ್ಯಾಶನಲ್ ಬ್ಯುಸಿನೆಸ್ ಸ್ಕೂಲ್ ಪ್ರಾಂಶುಪಾಲರಾದ ಡಾ| ಮಾಲಿನಿ ಎನ್. ಹೆಬ್ಬಾರ್, ವಿವಿಯ ಎಂಜಿನಿಯರಿಂಗ್‌ನ ಅಸೋಸಿಯೇಟ್ ಪ್ರೊಫೆಸರ್ ಮತ್ತು ಡೀನ್ ಡಾ| ಎಸ್. ರೂಬನ್, ಕ್ಯಾರೋಲಿನ್ ಮಾರಿಯಾ ಪಾಯಸ್, ಭಾಗ್ಯಲಕ್ಷ್ಮೀ ಹಾಗೂ ಪ್ರತೀಕ್ ಬಿ. ರೈ ಮಾತನಾಡಿದರು. ಕಾರ್ಯಕ್ರಮ ಸಂಯೋಜಕರಾದ ಸೌಮ್ಯ, ಗಣೇಶ್, ತುಳಸಿ ಕುಮಾರ್, ಅಪೇಕ್ಷಾ ರೈ ಉಪಸ್ಥಿತರಿದ್ದರು.

*Varthabharathi 12-06-2026*

# ಅಲೋಶಿಯಸ್ ವಿವಿಯಲ್ಲಿ ವಿಶ್ವ ಪರಿಸರ ದಿನಾಚರಣೆ

ಮಂಗಳೂರು, ಜೂ.11: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಪರಿಸರ ಕಾಳಜಿ ಕೇಂದ್ರವು ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ವಿಭಾಗಗಳ ಸಹಯೋಗದೊಂದಿಗೆ ವಿಶ್ವ ಪರಿಸರ ದಿನ 2026ರ ಅಂಗವಾಗಿ 'ನಮ್ಮ ಭವಿಷ್ಯಕ್ಕಾಗಿ ಮತ್ತು ಹವಾಮಾನಕ್ಕಾಗಿ ಪ್ರಕೃತಿಯಿಂದ ಪ್ರೇರಣೆ' ಎಂಬ ವಿಷಯದಲ್ಲಿ ವಿವಿಯ ಸಾನಿಧ್ಯ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು.

ಸಂತ ಅಲೋಶಿಯಸ್ ವಿವಿಯ ಎನ್‌ಸಿಸಿ ಆರ್ಮಿ ವಿಂಗ್, ಮಂಗಳೂರು ಸೆಂಟ್ರಲ್‌ನ ರೋಟರಿ ಕ್ಲಬ್ ಮತ್ತು ಮಂಗಳೂರು ನಗರದ ರೋಟರ್ಯಾಕ್ಟ್ ಕ್ಲಬ್‌ನ ಸಹಕಾರದೊಂದಿಗೆ ಕಾರ್ಯಕ್ರಮ ನಡೆಸಲಾಯಿತು.

ಸಹ ಕುಲಪತಿ ಫಾ.ಡಾ.ಮೆಲ್ವಿನ್ ಡಿಕುನ್ಹ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಭಾರತದ ಹಸಿರು ನಾಯಕ ಎಂದು ಜನಪ್ರಿಯವಾಗಿರುವ ಪ್ರಸಿದ್ಧ ಪರಿಸರವಾದಿ ಮತ್ತು ಅರಣ್ಯೀಕರಣ ತಜ್ಞ ಡಾ.ಆರ್.ಕೆ.ನಾಯರ್ ಮಾತನಾಡಿ, ಪರಿಸರ ಸಂರಕ್ಷಣೆ, ಜೀವವೈವಿಧ್ಯ ರಕ್ಷಣೆ ಮತ್ತು ಪರಿಸರ ಪುನಃಸ್ಥಾಪನೆಯ ತುರ್ತು ಅಗತ್ಯವನ್ನು ಒತ್ತಿ ಹೇಳಿದರು. ವೈಜ್ಞಾನಿಕ ಅರಣ್ಯೀಕರಣ ಪದ್ಧತಿಗಳ ಮೂಲಕ ಕ್ಷೀಣಿಸಿದ ಭೂದೃಶ್ಯಗಳು ಮತ್ತು ಬಂಜರು ಭೂಮಿಯನ್ನು ಅಭಿವೃದ್ಧಿ ಹೊಂದುತ್ತಿರುವ ಪರಿಸರ ವ್ಯವಸ್ಥೆಗಳಾಗಿ ಹೇಗೆ ಪರಿವರ್ತಿಸಬಹುದು ಎಂಬುದನ್ನು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಲೋಶಿಯಸ್ ವಿವಿಯ ರಿಜಿಸ್ಟ್ರಾರ್ ಡಾ.ರೊನಾಲ್ಡ್ ನಝ್ರೆತ್, ಮಂಗಳೂರು ಸೆಂಟ್ರಲ್ ರೋಟರಿ ಕ್ಲಬ್‌ನ ಅಧ್ಯಕ್ಷ ಭಾಸ್ಕರ್ ರಾವ್ ಕಟ್ಟಾ, ಆರ್‌ಎಸ್‌ಎಂಡಿಐಒ ಅಧ್ಯಕ್ಷ ಡ್ಯಾರಿಲ್ ಎಸ್. ಡಿಸೋಜ, ಅಂಬಾಮಹೇಶ್ವರಿ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಉಮಾನಾಥ್ ಕೋಟೆಕಾರ್, ದಕ್ಷಿಣ ಕನ್ನಡ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್., ಪರಿಸರ ಕಾಳಜಿ ಕೇಂದ್ರದ ಮುಖ್ಯ ಸಂಯೋಜಕ ಗ್ಲಾವಿನ್ ಥಾಮಸ್ ರೋಡ್ರಿಗಸ್, ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಸನಾ ಶೇಖ್ ಉಪಸ್ಥಿತರಿದ್ದರು.



*Udayavani 15-06-2026*



ಮಹಾನಗರ: ಮಂಗಳೂರಿನ ಜರ್ನಿ ಥೇಟರ್ ಗ್ರೂಪ್ ರಾಮಾಂಜನೇಯ ಕಾಳಗ ಎಂಬ ಯಕ್ಷಗಾನವನ್ನು ಸಂತ ಅಲೋಶಿಯಸ್ (ಪರಿಗಣಿತ) ವಿಶ್ವ ವಿದ್ಯಾನಿಲಯದ ಎಲ್.ಸಿ.ಆರ್.ಐ. ಸಭಾಂಗಣದಲ್ಲಿ ಪ್ರದರ್ಶಿಸಿತು. ಸದಾಶಿವ ಉಚ್ಚಿಲ, ಯಕ್ಷಗಾನದ ನಿರ್ದೇಶಕ ಸುನಿಲ್ ಪಲ್ಲಮಜಲು, ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಸಹ ಕುಲಪತಿ ವಂ|ಡಾ| ಮೆಲ್ವಿನ್ ಡಿಕುನ್ಹ, ಜರ್ನಿ ಥೇಟರ್ ಗ್ರೂಪ್ ನ ಶಶಾಂಕ್ ಐತಾಳ್, ಚಿನ್ಮಯಿ. ವಿ ಭಟ್ ಉಪಸ್ಥಿತರಿದ್ದರು.

*Hosadigantha 14-06-2026*

# ಅಲೋಶಿಯಸ್‌ನಲ್ಲಿ ಕನ್ನಡ ಎಂ.ಎಗೆ ವಿನೂತನ ಸ್ವರೂಪ

**ಮಂಗಳೂರು:** ಶತಮಾನದ ಕಾಲದಿಂದ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಕನ್ನಡ ಎಂ.ಎ.ಯ ಸ್ವರೂಪಕ್ಕೆ ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯವು ಹೊಸ ಸ್ಪರ್ಶ ನೀಡಿದೆ.

ಆಧುನಿಕ ಡಿಜಿಟಲ್ ಲೋಕದ ವಿವಿಧ ತಾಂತ್ರಿಕ ವಿಷಯಗಳು ಮತ್ತು ಇಂದಿನ ಉದ್ಯೋಗ ಸ್ನೇಹಿ ಕ್ಷೇತ್ರಗಳ ವಿಷಯಗಳನ್ನು ಕನ್ನಡಕ್ಕೆ ಸೇರಿಸಿ ಇಂದಿನ ಕನ್ನಡ ಜೆನ್ ಜಿ ತಲೆಮಾರಿಗೆ ಕನ್ನಡದ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಡಿಜಿಟಲ್ ಸಂವಹನ, ಹಿರಿತೆರೆ - ಕಿರಿತೆರೆ ಸಹಿತ ಎಲ್ಲ ಬಗೆಯ ಮನೋರಂಜನಾ ಉದ್ಯಮ, ಮಾಧ್ಯಮ, ಅನುವಾದ ಉದ್ಯಮ, ಕೃತಕ ಬುದ್ಧಿಮತ್ತೆ, ಪ್ರಾಂಪ್ಟ್ ಇಂಜಿನಿಯರಿಂಗ್, ಕಂಟೆಂಟ್ ಬರವಣಿಗೆ, ಸ್ಕ್ರಿಪ್ಟ್ ರಚನೆ, ಜಾಹೀರಾತು ಉದ್ಯಮ, ವೇದಿಕೆ ನಿರ್ವಹಣೆ ಮೊದಲಾದ ಕ್ಷೇತ್ರಗಳಲ್ಲಿರುವ ಉದ್ಯೋಗಾವಕಾಶಗಳಿಗೆ ಕನ್ನಡದ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವುದು ಈ ಹೊಸ ಬಗೆಯ ಕನ್ನಡ ಎಂ. ಎ.ಯ ಮುಖ್ಯ ಉದ್ದೇಶ.

> ▸▸ ಇಂದಿನ ಕನ್ನಡ ಜೆನ್ ಜಿ ತಲೆಮಾರಿಗೆ ಕನ್ನಡದ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕೆ.ಎ.ಎಸ್, ಐ.ಎ.ಯಸ್ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುಕೂಲವಾಗುವ ಎಲ್ಲ ಬಗೆಯ ಕನ್ನಡ ಸಾಹಿತ್ಯ, ಸಾಹಿತ್ಯ ಚರಿತ್ರೆ, ವಿಮರ್ಶೆ, ಜಾನಪದ, ಕಾವ್ಯಮೀಮಾಂಸೆ - ಮೊದಲಾದ ಸಂಪ್ರಾದಾಯಿಕ ವಿಷಯಗಳನ್ನೂ ಅವುಗಳ ಪತ್ಯಗಳನ್ನೂ ಈ ಕೋರ್ಸಿನಲ್ಲಿ ಯಥಾವತ್ತಾಗಿ ಅಳವಡಿಸಿರುವುದರಿಂದ ಎಂ ಎ ಪದವಿ ಮುಗಿಸುವ ಹೊತ್ತಿಗೆ ವಿದ್ಯಾರ್ಥಿಗಳು ಉನ್ನತ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತಯಾರಾಗಿರುತ್ತಾರೆ.

ಅಧ್ಯಾಪನ ವೃತ್ತಿಯ ಅವಕಾಶಕ್ಕೆ ಕೊರತೆಯಾಗದಂತೆ, ಅತ್ಯಾಧುನಿಕ ವಿಚಾರಗಳು ಮರೆಯಾಗದಂತೆ ಎಲ್ಲವನ್ನು ಬೆಸೆದು ಎಚ್ಚರದಿಂದ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ. ಪಠ್ಯಕ್ರಮದ ತಯಾರಿಯ ಸಂದರ್ಭದಲ್ಲಿ ಬೆಂಗಳೂರು ಮತ್ತು ಮೈಸೂರಿನ ಕನ್ನಡ ಡಿಜಿಟಲ್ ಸಂವಹನ ಪರಿಣತರನ್ನು, ಮನೋರಂಜನಾ ಉದ್ಯಮ ತಜ್ಞರನ್ನು, ಕನ್ನಡದ ಬೆಳವಣಿಗೆಯ ಕಾಳಜಿಯುಳ್ಳ ಸಾಹಿತ್ಯವಿಮರ್ಶಕರನ್ನು ಒಳಗೊಂಡ ಅಧ್ಯಯನ ಮಂಡಳಿಯ ಮಾರ್ಗದರ್ಶನ ಮತ್ತು ತಾಂತ್ರಿಕ ಸಹಾಯವನ್ನು ಪಡೆಯಲಾಗಿದೆ.

ಇದೇ ಶೈಕ್ಷಣಿಕ ವರ್ಷ (2026-27) ದಿಂದ ಆರಂಭವಾಗುವ ಈ ಕನ್ನಡ ಎಂ. ಎ. ಕೋರ್ಸು ಆಸಕ್ತ ವಿದ್ಯಾರ್ಥಿಗಳಿಗೆ ಒಂದು ಉತ್ತಮ ಅವಕಾಶವಾಗಿದೆ ಎಂದು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*Samyuktha Karnataka 19-06-2026*

# ರೆಮೋನಾ ದೂರದರ್ಶನ ಕಲಾವಿದೆಯಾಗಿ ಆಯ್ಕೆ

**ಮಂಗಳೂರು:** ಸಂತ ಅಲೋಸಿಯಸ್ ಪರಿಗಣಿತ ವಿ.ವಿ.ವಿದ್ಯಾರ್ಥಿನಿ ರೆಮೋನಾ ಎವೆಟ್ ಪೆರೇರಾ ಬೆಂಗಳೂರು ದೂರದರ್ಶನ ಚಂದನವಾಹಿನಿ ವತಿಯಿಂದ ನಡೆಸಲಾದ ಆಡಿಷನ್‌ನಲ್ಲಿ ಯಶಸ್ವಿಯಾಗಿ ಭಾಗವಹಿಸಿ, ಬಿ-ಗ್ರೇಡ್ ಶಾಸ್ತ್ರೀಯ ನೃತ್ಯ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ.



ಸೌರಭ ಸಂಗೀತ ನೃತ್ಯ ಕಲಾ ಪರಿಷತ್ ಗುರು ಡಾ.ಶ್ರೀವಿದ್ಯಾ ಅವರ ಶಿಷ್ಯೆಯಾಗಿರುವ ರೆಮೋನಾ ಅವರು ಕಳೆದ 18 ವರ್ಷಗಳಿಂದ ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದು, ಅವರ ಮಾರ್ಗದರ್ಶನದಲ್ಲಿ ತಮ್ಮ ಕಲಾ ಪ್ರತಿಭೆಯನ್ನು ಬೆಳೆಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

*Indian Express 19-06-2026*

# Remona Evette Pereira is Doordarshan's B-Grade Classical Dance Artist

Mangaluru: Remona Evette Pereira, a BA (English Literature and History) student at St Aloysius Deemed to be University, has been selected as a B-Grade Classical Dance Artist by Doordarshan Chandana, Prasar Bharati, after successfully clearing its audition process. A disciple of Dr Shrividya of Saurabha Sangeetha Nritya Kala Parishath, Remona has been undergoing training in Bharatanatyam for the past 18 years.

*Vijayakarnataka 19-06-2026*

## ದೂರದರ್ಶನ ಬಿ-ಗ್ರೇಡ್ ಕಲಾವಿದೆಯಾಗಿ ರೆಮೋನಾ

**ಮಂಗಳೂರು:** ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಬಿಎ ವಿದ್ಯಾರ್ಥಿನಿ ರೆಮೋನಾ ಎವೆಟ್ ಪಿರೇರಾ ಅವರು ಪ್ರಸಾರ ಭಾರತಿ ಅಧೀನದ ದೂರದರ್ಶನ ಚಂದನ ವಾಹಿನಿ ನಡೆಸಿದ ಆಡಿಷನ್‌ನಲ್ಲಿ ಯಶಸ್ವಿಯಾಗಿ ಭಾಗವಹಿಸಿ, ಬಿ-ಗ್ರೇಡ್ ಶಾಸ್ತ್ರೀಯ ನೃತ್ಯ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ. ಸೌರಭ ಸಂಗೀತ ನೃತ್ಯ ಕಲಾ ಪರಿಷತ್‌ನ ಗುರು ಡಾ.ಶ್ರೀವಿದ್ಯಾ ಶಿಷ್ಯೆಯಾಗಿರುವ ರೆಮೋನಾ ಕಳೆದ 18 ವರ್ಷಗಳಿಂದ ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದು ತಮ್ಮ ಗುರುಗಳ ಮಾರ್ಗದರ್ಶನದಲ್ಲಿ ನಿರಂತರವಾಗಿ ಕಲಾ ಪ್ರತಿಭೆಯನ್ನು ಬೆಳೆಸಿಕೊಂಡಿದ್ದಾರೆ. ಈ ಹಿಂದೆ 2025ರ ಜು.21ರಿಂದ 28ರವರೆಗೆ ಸತತ 170 ಗಂಟೆಗಳ ಕಾಲ ನೃತ್ಯ ಪ್ರದರ್ಶಿಸುವ ಮೂಲಕ ಅತ್ಯಂತ ದೀರ್ಘ ನೃತ್ಯ ಮ್ಯಾರಥಾನ್ ಸಾಧನೆ ಮಾಡಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದ್ದ ಅವರು ರಾಷ್ಟ್ರಾದ್ಯಂತ ಗಮನ ಸೆಳೆದಿದ್ದರು. ದೂರದರ್ಶನದ ಮಾನ್ಯತೆ ಪಡೆದ ಕಲಾವಿದರ ಸಾಲಿನಲ್ಲಿ ಸ್ಥಾನ ಪಡೆದಿರುವುದು ಅವರ ಕಲಾ ಪಯಣದ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ.



*Vijayavani 26-03-2026*

## ರೆಮೋನಾಗೆ ದೂರದರ್ಶನ ಬಿ-ಗ್ರೇಡ್

**ಮಂಗಳೂರು:** ಸೇಂಟ್ ಅಲೋಶಿಯಸ್ ಕಾಲೇಜಿನ ವಿದ್ಯಾರ್ಥಿನಿ ರೆಮೋನಾ ಎವೆಟ್ ಪೆರೇರಾ ದೂರದರ್ಶನದ ಬಿ-ಗ್ರೇಡ್ ಶಾಸ್ತ್ರೀಯ ನೃತ್ಯ ಕಲಾವಿದೆಯಾಗಿ ಆಯ್ಕೆಯಾಗಿದ್ದಾರೆ. ಸೌರಭ ಸಂಗೀತ ನೃತ್ಯ ಕಲಾ ಪರಿಷತ್‌ನ ಗುರು ಡಾ.ಶ್ರೀವಿದ್ಯಾ ಅವರ ಶಿಷ್ಯೆಯಾಗಿರುವ ರೆಮೋನಾ 18 ವರ್ಷಗಳಿಂದ ಭರತನಾಟ್ಯ ಅಭ್ಯಾಸ ಮಾಡುತ್ತಿದ್ದಾರೆ. 2025ರ ಜುಲೈ 21ರಿಂದ 28ರವರೆಗೆ ಸತತ 170 ಗಂಟೆ ನೃತ್ಯ ಪ್ರದರ್ಶಿಸಿ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆಯುವ ಮೂಲಕ ರೆಮೋನಾ ನಾಡಿನ ಗಮನ ಸೆಳೆದಿದ್ದರು.



*Hosadigantha 21-06-2026*

# ಕಂಬಾರರು ದೇಸೀ ಪರಂಪರೆಯ ಪ್ರತಿಪಾದಕರು: ಡಾ.ಧನಂಜಯ ಕುಂಬ್ಳೆ



**ಮಂಗಳೂರು:** ಕನ್ನಡ ನವ್ಯ ಸಾಹಿತ್ಯ ಟಿ.ಎಸ್. ಎಲಿಯೆಟ್ ಮತ್ತು ಇತರೆ ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾಗ ಸಾಹಿತಿ ಚಂದ್ರಶೇಖರ ಕಂಬಾರರು 'ಹೇಳತೇನ ಕೇಳಾ' ಮೂಲಕ ಭಾರತೀಯ ಪರಂಪರೆ ಮತ್ತು ದೇಸೀ ಜಾನಪದ ಸಂಸ್ಕೃತಿಯನ್ನು ಪ್ರತಿಪಾದಿಸಿದವರು. ನಮ್ಮಲ್ಲೇ ಶ್ರೀಮಂತವಾದ ಮೌಖಿಕ ಮತ್ತು ಸಮೃದ್ಧ ಸಾಹಿತ್ಯ ಇರುವಾಗ ಪಾಶ್ಚಾತ್ಯ ಚಿಂತನೆಗಳಿಗೆ ನಾವು ಯಾಕೆ ಮರುಳಾಗಬೇಕು ಎಂದು ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ಧನಂಜಯ ಕುಂಬ್ಳೆ ಹೇಳಿದರು.

ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಕಾನೂನು ಶಿಕ್ಷಣ ವಿಭಾಗದ ಸಭಾಂಗಣದಲ್ಲಿ ನಡೆದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ ಕವಿ, ಕಾವ್ಯ ಸಾಹಿತ್ಯ ಪರಂಪರೆ ಎಂಬ ವಿಷಯದ ಕುರಿತ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಎಂ.ಪಿ. ಶ್ರೀನಾಥ್ ಅಧ್ಯಕ್ಷತೆ ವಹಿಸಿದ್ದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಸಹಪ್ರಾಧ್ಯಾಪಕಿ ಡಾ.ಫರೀಟಾ ವೇಗಸ್ ಉದ್ಘಾಟಿಸಿದರು. ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡೆಲ್ಲಾ ಲೋಬೊ, ಕಾರ್ಯಕ್ರಮದ ಸಂಯೋಜಕಿ, ಉಪನ್ಯಾಸಕಿ ಸಂಧ್ಯಾ ಉಪಸ್ಥಿತರಿದ್ದರು. ಸಹಪ್ರಾಧ್ಯಾಪಕಿ ಡಾ. ವಿಜಯಲಕ್ಷ್ಮೀ ನಾಯಕ್ ಸ್ವಾಗತಿಸಿದರು. ವಿದ್ಯಾರ್ಥಿನಿ ಅಶ್ವಿನಿ ವಂದಿಸಿದರು. ಮೇಘನಾ ಕುಂದಾಪುರ ನಿರೂಪಿಸಿದರು.

*Kannadaprabha 21-06-2026*

# ಕಂಬಾರ ದೇಶಿ ಪರಂಪರೆ ಪ್ರತಿಪಾದಕರು: ಕುಂಬ್ಳೆ

## ಕಂಬಾರರ ಸಾಹಿತ್ಯ ಪರಂಪರೆ ಉಪನ್ಯಾಸ ಕಾರ್ಯಕ್ರಮ

**ಮಂಗಳೂರು:** ಕನ್ನಡ ನವ್ಯ ಸಾಹಿತ್ಯ ಟಿ.ಎಸ್. ಎಲಿಯೆಟ್ ಮತ್ತು ಇತರೆ ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾಗ ಚಂದ್ರಶೇಖರ ಕಂಬಾರರು 'ಹೇಳತೇನ ಕೇಳಾ' ಮೂಲಕ ಭಾರತೀಯ ಪರಂಪರೆ ಮತ್ತು ದೇಸೀ ಜಾನಪದ ಸಂಸ್ಕೃತಿ ಪ್ರತಿಪಾದಿಸಿದವರು ಎಂದು ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ಧನಂಜಯ ಕುಂಬ್ಳೆ ಹೇಳಿದರು.

ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಕಾನೂನು ಶಿಕ್ಷಣ ವಿಭಾಗದಸಭಾಂಗಣದಲ್ಲಿನಡೆದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ ಕವಿ, ಕಾವ್ಯ ಸಾಹಿತ್ಯ ಪರಂಪರೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಯುವಜನತೆಗೆ ಕನ್ನಡ ಭಾಷೆ ಸಾಹಿತ್ಯದ ಅಭಿಮಾನ ಹುಟ್ಟಿಸುವ ಕಾರ್ಯಕ್ರಮಗಳನ್ನು ಸಾಹಿತ್ಯ ಪರಿಷತ್ತು ನಿರಂತರ ನಡೆಸುತ್ತಾ ಬರುತ್ತಿದೆ ಎಂದರು. ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಸಹ ಪ್ರಾಧ್ಯಾಪಕ ಡಾ.ಫರೀಟಾ ವೇಗಸ್ ಉದ್ಘಾಟಿಸಿದರು. ಶಿಕ್ಷಣ ವಿಭಾಗ ಮುಖ್ಯಸ್ಥೆ ಡೆಲ್ಲಾ ಲೋಬೋ, ಕಾರ್ಯಕ್ರಮದ ಸಂಯೋಜಕಿ ಉಪನ್ಯಾಸಕಿ ಸಂಧ್ಯಾ ಇದ್ದರು. ಸಹಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮೀ ನಾಯಕ್ ಸ್ವಾಗತಿಸಿದರು. ವಿದ್ಯಾರ್ಥಿನಿ ಅಶ್ವಿನಿ ವಂದಿಸಿದರು. ಮೇಘನಾ ಕುಂದಾಪುರ ನಿರೂಪಿಸಿದರು.



ಕವಿ, ಕಾವ್ಯ ಸಾಹಿತ್ಯ ಪರಂಪರೆ ಎಂಬ ವಿಷಯದ ಕುರಿತು ಉಪನ್ಯಾಸ ನಡೆಯಿತು.

*Varthabharathi 21-06-2026*

# ಕಂಬಾರರು ದೇಸಿ ಪರಂಪರೆಯ ಪ್ರತಿಪಾದಕ: ಡಾ.ಧನಂಜಯ ಕುಂಬ್ಳೆ



ಮಂಗಳೂರು, ಜೂ.20: ಸಾಹಿತಿ ಚಂದ್ರಶೇಖರ ಕಂಬಾರರು ಭಾರತೀಯ ಪರಂಪರೆ ಮತ್ತು ದೇಸಿ ಜಾನಪದ ಸಂಸ್ಕೃತಿಯನ್ನು ಪ್ರತಿಪಾದಿಸಿದವರು. ನಮ್ಮಲ್ಲೇ ಶ್ರೀಮಂತವಾದ ಮೌಖಿಕ ಮತ್ತು ಸಮೃದ್ಧ ಸಾಹಿತ್ಯ ಇರುವಾಗ ಪಾಶ್ಚಾತ್ಯ ಚಿಂತನೆಗಳಿಗೆ ಯಾಕೆ ಮರುಳಾಗಬೇಕು ಎಂದು ಪ್ರಶ್ನಿಸಿದವರು ಎಂದು ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ಧನಂಜಯ ಕುಂಬ್ಳೆ ಹೇಳಿದ್ದಾರೆ.

ಅವರು ದ.ಕ. ಜಿಲ್ಲಾ ಕಸಾಪವು ಸಂತ ಅಲೋಶಿಯಸ್ ಪರಿಗಣಿತ ವಿವಿಯ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಕಾನೂನು ಶಿಕ್ಷಣ ವಿಭಾಗದ ಸಭಾಂಗಣದಲ್ಲಿ ಹಮ್ಮಿಕೊಂಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ 'ಕವಿ, ಕಾವ್ಯ ಸಾಹಿತ್ಯ ಪರಂಪರೆ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಭಾರತವು ಬಹುಭಾಷೆ, ಜಾತಿ, ಸಂಸ್ಕೃತಿಗಳ ನಾಡು. ಅದರ ಮಹತ್ವನ್ನು ಕಂಬಾರರು ಶಿವಾಪುರ ಎನ್ನುವ ವಿಶಿಷ್ಟ ಲೋಕವೊಂದರ ಸೃಷ್ಟಿಯ ಮೂಲಕ ತಮ್ಮ ಕಾವ್ಯ ಕಾದಂಬರಿಗಳಲ್ಲಿ ಮೂಡಿಸಿದ್ದಾರೆ. ಕಂಬಾರರ ಸಾಹಿತ್ಯದಲ್ಲಿ ಅನುಭವ ಮತ್ತು ನೆನಪುಗಳ ದಟ್ಟ ನಿರೂಪಣೆಯಿದ್ದು ಜಾಗತೀಕರಣ, ಕಾಮ ಮತ್ತು ಸಾವಿನ ಕುರಿತ ಗಂಭೀರ ಜಿಜ್ಞಾಸೆಯಿದೆ ಎಂದವರು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದ.ಕ. ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ್ ಮಾತನಾಡಿ, ಯುವಜನತೆಯಲ್ಲಿ ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ಅಭಿಮಾನ ಹುಟ್ಟಿಸುವ ಕಾರ್ಯಕ್ರಮಗಳನ್ನು ಕಸಾಪ ನಿರಂತರ ನಡೆಸುತ್ತಾ ಬರುತ್ತಿದೆ. ಶಿಕ್ಷಣ ಸಂಸ್ಥೆಗಳು ಇಂತಹ ಕಾರ್ಯಕ್ರಮಗಳಿಗೆ ಬೆಂಬಲವಾಗಿ ನಿಲ್ಲಬೇಕು. ಕನ್ನಡಕ್ಕೆ ಜ್ಞಾನಪೀಠ ತಂದುಕೊಟ್ಟ ಸಾಹಿತಿಗಳ ಕುರಿತು ಎಂಟು ಉಪನ್ಯಾಸಗಳನ್ನು ವಿವಿಧೆಡೆ ಸಂಘಟಿಸಲಾಗಿದೆ ಎಂದು ಹೇಳಿದರು.

ಸಂತ ಅಲೋಶಿಯಸ್ ಪರಿಗಣಿತ ವಿವಿಯ ಶಿಕ್ಷಣ ವಿಭಾಗದ ಸಹ ಪ್ರಾಧ್ಯಾಪಕ ಡಾ.ಫರೀಟಾ ವೇಗಸ್ ಉದ್ಘಾಟಿಸಿದರು. ಶಿಕ್ಷಣ ವಿಭಾಗದ ಮುಖ್ಯಸ್ಥೆ ಡೆಲ್ಲಾ ಲೋಬೊ, ಕಾರ್ಯಕ್ರಮದ ಸಂಯೋಜಕಿ ಉಪನ್ಯಾಸಕಿ ಸಂಧ್ಯಾ ಉಪಸ್ಥಿತರಿದ್ದರು.

ಸಹ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮೀ ನಾಯಕ್ ಸ್ವಾಗತಿಸಿದರು. ವಿದ್ಯಾರ್ಥಿನಿ ಅಶ್ವಿನಿ ವಂದಿಸಿದರು. ಮೇಘನಾ ಕುಂದಾಪುರ ಕಾರ್ಯಕ್ರಮ ನಿರೂಪಿಸಿದರು.

*Samyuktha Karnataka 21-06-2026*

# ಪಿಲಿಕುಳ ಪ್ರಾಧಿಕಾರದ ಜೊತೆ ಅಲೋಶಿಯಸ್ ಒಪ್ಪಂದ

**ಸಂ.ಕ.ಸಮಾಚಾರ, ಮಂಗಳೂರು**
ಸಸ್ಯಗಳ ವೈವಿಧ್ಯತೆ, ಸಂರಕ್ಷಣೆ ಹಾಗೂ ಔಷಧೀಯ ಸಸ್ಯಶಾಸ್ತ್ರದ ಕುರಿತ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸುವ ಉದ್ದೇಶದಿಂದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು (ಪರಿಗಣಿತ ವಿಶ್ವವಿದ್ಯಾನಿಲಯ)ದ ಸಸ್ಯಶಾಸ್ತ್ರ ವಿಭಾಗ ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಸ್ಯಕಾಶಿ ವಿಭಾಗದ ನಡುವೆ ಪರಸ್ಪರ ಸಹಕಾರ ಒಪ್ಪಂದಕ್ಕೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಎರಡೂ ಸಂಸ್ಥೆಗಳ ಗಣ್ಯರ ಉಪಸ್ಥಿತಿಯಲ್ಲಿ ಸಹಿ ಮಾಡಿಕೊಳ್ಳಲಾಯಿತು.

ಸಂತ ಅಲೋಶಿಯಸ್ ಕಾಲೇಜು ಪ್ರೋ. ಸಹ-ಕುಲಾಧಿಪತಿ ರೆ.ಫಾ. ಮೆಲ್ವಿನ್ ಡಿ ಕುನ್ಹಾ, ಸಹಭಾಗಿತ್ವ ಘಟಕದ ಅಧ್ಯಕ್ಷ ಡಾ.ರೋಶನ್, ಸಸ್ಯಶಾಸ್ತ್ರ ವಿಭಾಗದ ಡಾ.ಜ್ಯೋತಿ ಮಿರಾಂಡ, ಶಿಲ್ಪಾ, ಸನಾ ಶೇಕ್ ಮತ್ತು ಅಕ್ಷತಾ. ಆರ್ ಅಮಿನ್ ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶ್ರೀಕಾಂತ್ ರಾವ್, ಆಡಳಿತಾಧಿಕಾರಿ ಡಾ. ಅಶೋಕ್ ಕೆ.ಆರ್., ವೈಜ್ಞಾನಿಕಾಧಿಕಾರಿ ರಾಮಕೃಷ್ಣ ಮರಾಟಿ, ಕ್ಯುರೇಟರ್ ಜಗನ್ನಾಥ್ ಹಾಗೂ ಕಮ್ಯುನಿಟಿ ಮೊಬಿಲೈಸರ್ ಶಿವರಾಮ್, ಹೃತಿಕ್, ವಿಕ್ಟರ್ ಉಪಸ್ಥಿತರಿದ್ದರು.



*Kannadaprabha 21-06-2026*

# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ, ಅಲೋಶಿಯಸ್ ಕಾಲೇಜು ಒಪ್ಪಂದ

- **ಸಂಶೋಧನೆ ಉತ್ತೇಜಿಸುವ ಉದ್ದೇಶದಿಂದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು ಸಸ್ಯಶಾಸ್ತ್ರ ವಿಭಾಗ ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಒಪ್ಪಂದಕ್ಕೆ ಸಹಿ**

• **ಕನ್ನಡಪ್ರಭ ವಾರ್ತೆ** ಮಂಗಳೂರು
ಸಸ್ಯಗಳ ವೈವಿಧ್ಯತೆ, ಸಂರಕ್ಷಣೆ ಹಾಗೂ ಔಷಧೀಯ ಸಸ್ಯಶಾಸ್ತ್ರದ ಕುರಿತ ಅಧ್ಯಯನ ಮತ್ತು ಸಂಶೋಧನೆ ಉತ್ತೇಜಿಸುವ ಉದ್ದೇಶದಿಂದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು (ಪರಿಗಣಿತ ವಿಶ್ವವಿದ್ಯಾನಿಲಯ)ದ ಸಸ್ಯಶಾಸ್ತ್ರ ವಿಭಾಗ ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಸ್ಯಕಾಶಿ ವಿಭಾಗದ ನಡುವೆ ಪರಸ್ಪರ ಸಹಕಾರ ಒಪ್ಪಂದಕ್ಕೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಎರಡೂ ಸಂಸ್ಥೆಗಳ ಗಣ್ಯರ ಉಪಸ್ಥಿಯಲ್ಲಿ ಸಹಿ ಮಾಡಿಕೊಳ್ಳಲಾಯಿತು.

ಸಂತ ಅಲೋಶಿಯಸ್ ಕಾಲೇಜು (ಪರಿಗಣಿತ ವಿಶ್ವವಿದ್ಯಾನಿಲಯ) ಸಹ-ಕುಲಾಧಿಪತಿ ರೆ.ಫಾ.ಮೆಲ್ವಿನ್ ಡಿ ಕುನ್ಹಾ, ಸಹಭಾಗಿತ್ವ ಘಟಕದ ಅಧ್ಯಕ್ಷ ಡಾ.ರೋಶನ್, ಸಸ್ಯಶಾಸ್ತ್ರ ವಿಭಾಗದ ಡಾ.ಜ್ಯೋತಿ ಮಿರಾಂಡ, ಶಿಲ್ಪಾ, ಸನಾ ಶೇಕ್, ಅಕ್ಷತಾ ಆರ್. ಅಮಿನ್, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶ್ರೀಕಾಂತ್ ರಾವ್, ಆಡಳಿತಾಧಿಕಾರಿ ಡಾ.ಅಶೋಕ್ ಕೆ.ಆರ್., ವೈಜ್ಞಾನಿಕಾಧಿಕಾರಿ ರಾಮಕೃಷ್ಣ ಮರಾಟಿ, ಕ್ಯುರೇಟರ್ ಜಗನ್ನಾಥ್, ಕಮ್ಯುನಿಟಿ ಮೊಬಿಲೈಸರ್ ಶಿವರಾಮ್, ಹೃತಿಕ್, ವಿಕ್ಟರ್ ಈ ಸಂದರ್ಭದಲ್ಲಿ ಇದ್ದರು

*Hosadigantha 22-06-2026*

# ಪಿಲಿಕುಳ ಪ್ರಾಧಿಕಾರ-ಅಲೋಶಿಯಸ್ ಕಾಲೇಜು ಒಪ್ಪಂದ

**ಮಂಗಳೂರು:** ಸಸ್ಯಗಳ ವೈವಿಧ್ಯತೆ, ಸಂರಕ್ಷಣೆ ಹಾಗೂ ಔಷಧೀಯ ಸಸ್ಯಶಾಸ್ತ್ರದ ಕುರಿತ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸುವ ಉದ್ದೇಶದಿಂದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು (ಪರಿಗಣಿತ ವಿಶ್ವವಿದ್ಯಾನಿಲಯ)ದ ಸಸ್ಯಶಾಸ್ತ್ರ ವಿಭಾಗ ಮತ್ತು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಸಸ್ಯಕಾಶಿ ವಿಭಾಗದ ನಡುವೆ ಪರಸ್ಪರ ಸಹಕಾರ ಒಪ್ಪಂದಕ್ಕೆ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಪ್ರಾದೇಶಿಕ ವಿಜ್ಞಾನಕೇಂದ್ರದಲ್ಲಿ ಎರಡೂ ಸಂಸ್ಥೆಗಳ ಗಣ್ಯರ ಉಪಸ್ಥಿಯಲ್ಲಿ ಸಹಿ ಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಸಂತ ಅಲೋಶಿಯಸ್ ಕಾಲೇಜು ಪ್ರೊ. ಸಹ-ಕುಲಾಧಿಪತಿ ರೆ. ಫಾ.ಮೆಲ್ವಿನ್ ಡಿಕುನ್ಹಾ, ಸಹಭಾಗಿತ್ವ ಘಟಕದ ಅಧ್ಯಕ್ಷ ಡಾ. ರೋಶನ್, ಸಸ್ಯಶಾಸ್ತ್ರ ವಿಭಾಗದ ಡಾ. ಜ್ಯೋತಿ ಮಿರಾಂಡ, ಶಿಲ್ಪಾ, ಸನಾ ಶೇಕ್ ಮತ್ತು ಅಕ್ಷತಾ ಆರ್. ಅಮಿನ್ ಹಾಗೂ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶ್ರೀಕಾಂತ್ ರಾವ್, ಆಡಳಿತಾಧಿಕಾರಿ ಡಾ. ಅಶೋಕ್ ಕೆ.ಆರ್., ವೈಜ್ಞಾನಿಕಾಧಿಕಾರಿ ರಾಮಕೃಷ್ಣ ಮರಾಟಿ, ಕ್ಯುರೇಟರ್ ಜಗನ್ನಾಥ್ ಹಾಗೂ ಕಮ್ಯುನಿಟಿ ಮೊಬಿಲೈಸರ್ ಶಿವರಾಮ್, ಹೃತಿಕ್, ವಿಕ್ಟರ್ ಉಪಸ್ಥಿತರಿದ್ದರು.

## St Aloysius college, Pilikula authority sign MoU to promote plant research

*Times of India 22-06-2026*

**Mangaluru:** A memorandum of understanding was signed between the department of botany of St Aloysius College (deemed to be university), Mangaluru, and the Arboretum division of the Pilikula Development Authority at the authority's regional science centre, in the presence of dignitaries from both institutions; the collaboration aims to promote study and research in plant diversity, conservation, and medicinal botany. Fr Melvin D'Cunha, pro vice-chancellor of St Aloysius, along with partnership unit head Dr Roshan and faculty members Jyothi Miranda, Shilpa, Sana Sheikh and Akshatha R Amin were present; also present were Pilikula Development Authority commissioner Srikanth Rao, administrative officer Dr Ashok KR, scientific officer Ramakrishna Marati, curator Jagannath, and community mobilisers Shivaram, Hrithik and Victor.

*Udayavani 22-06-2026*

## ಮಂಗಳೂರು ಸಂತ ಅಲೋಶಿಯಸ್ ಗೊನ್ಸಾಗ ಹಬ್ಬ ಆಚರಣೆ




**ಕೊಡಿಯಾಲಬೈಲು, ಜೂ.21:** ಅಲೋಶಿಯಸ್ ಸಮೂಹ ಸಂಸ್ಥೆಗಳ ಪೋಷಕ ಸಂತರಾದ ಅಲೋಶಿಯಸ್ ಗೊನ್ಸಾಗ ಅವರ ಹಬ್ಬವನ್ನು ಲೊಯೊಲಾ ಸಭಾಂಗಣದಲ್ಲಿ ಆಚರಿಸಲಾಯಿತು.

ಉಡುಪಿ ಧರ್ಮಪ್ರಾಂತ್ಯದ ವಿಕಾರ್ ಜನರಲ್ ವಂ। ಗು। ಫ್ರಾನ್ಸಿಸ್ ಕ್ಸೇವಿಯರ್ ಲೂಯಿಸ್ ಅವರು ಬಲಿಪೂಜೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಅಲೋಶಿಯಸ್ ಸಮೂಹ ಸಂಸ್ಥೆಗಳ ವರಿಷ್ಠರಾದ ವಂ। ಗು। ಬ್ರಾಯನ್ ಪಿರೇರಾ, ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ವಂ। ಗು। ಕ್ಲಿಫರ್ಡ್ ಸಿಕ್ವೇರಾ, ವಂ। ಗು। ಪ್ರಶಾಂತ್ ಮಾಡ್ತಾ, ವಂ। ಗು। ಲೂಯಿಸ್ ಡಿ'ಸೋಜಾ, ವಿವಿಧ ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಜೆಸ್ವಿಟ್ ಗುರುಗಳು ಉಪಸ್ಥಿತರಿದ್ದರು. ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕ ಹಾಗೂ ಶಿಕ್ಷಕೇತರ ವೃಂದ ಹಾಗೂ ಕಾಲೇಜಿನ ಹಿತಚಿಂತಕರು ಹಬ್ಬದ ಆಚರಣೆಯಲ್ಲಿ ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ವಂ। ಗು। ಫ್ರಾನ್ಸಿಸ್ ಕ್ಸೇವಿಯರ್‌ಲೂಯಿಸ್, ವಂ। ಗು। ಪ್ರಶಾಂತ್ ಮಾಡ್ತಾ ಹಾಗೂ ವಂ। ಗು। ಲೂಯಿಸ್ ಡಿಸೋಜ ಅವನ್ನು ಸಮ್ಮಾಯಿತು. ವಂ। ಗು। ಮರ್ವಿನ್ ಫೆರ್ನಾಂಡಿಸ್ ಸಮ್ಮಾನ ಕಾರ್ಯಕ್ರಮ ನಡೆಸಿಕೊಟ್ಟರು. ಉಪನ್ಯಾಸಕಿ ಫಿಯೋನಾ ಮೋರಸ್ ವಂದಿಸಿದರು. ಮ್ಯೂರಲ್ ಫುರ್ಟಾಡೋ ನಿರೂಪಿಸಿದರು. ಸಂತ ಅಲೋಶಿಯಸ್ ಗೊನ್ಸಾಗ ಹಬ್ಬದ ಪ್ರಯುಕ್ತ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು.

Hosadigantha 22-06-2026

# ಬದುಕಿನಲ್ಲಿ ಶಿಸ್ತು ಅತೀ ಮುಖ್ಯ: ಬ್ರಾಯನ್ ಪಿರೇರಾ

**ಮಂಗಳೂರು:** ಸಂತ ಅಲೋಶಿಯಸ್ ಗೊನ್ಸಾಗ ಅವರ ತತ್ವಗಳಾದ ನಿಸ್ವಾರ್ಥ ಸೇವೆ, ಪರಿಶುದ್ಧತೆ ಮತ್ತು ದೇವರ ಮೇಲಿನ ಭಕ್ತಿಯನ್ನು ಅನುಸರಿಸುತ್ತಾ, ವಿದ್ಯಾರ್ಥಿಗಳು ಕನಸು, ಸಮರ್ಪಣೆ ಹಾಗೂ ಶಿಸ್ತು- ಈ ಮೂರು ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದುಸಂತ ಅಲೋಶಿಯಸ್ ಸಂಸ್ಥೆಯ ರೆಕ್ಟರ್ ಫಾ. ಬ್ರಾಯನ್ ಪಿರೇರಾ ಹೇಳಿದರು.

ಅವರು ಶನಿವಾರ ಮಂಗಳೂರಿನ ಸಂತ ಅಲೋಶಿಯಸ್ ಗೊನ್ಸಾಗ ಶಾಲೆಯ ಸಭಾಂಗಣದಲ್ಲಿ ಜರಗಿದ ಸಂತ ಅಲೋಶಿಯಸ್ ಗೊನ್ಸಾಗರವರ ಸಂಸ್ಮರಣಾ ಹಬ್ಬಕ್ಕೆ ಸರ್ವಧರ್ಮ ಪ್ರಾರ್ಥನೆಯ ಮೂಲಕ ಚಾಲನೆ ನೀಡಿ ಮಾತನಾಡಿದರು .

ಶಾಲೆಯ ಪ್ರಿನ್ಸಿಪಾಲ್ ಫಾ.ರೋಹನ್ ಡಿಆಲ್ಮೇಡಾ ಅವರು, ಸಂತ ಅಲೋಶಿಯಸ್ ಗೊನ್ಸಾಗ ಅವರ ನಿಸ್ವಾರ್ಥ ಸೇವೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಾ, ಸಂತ ಅಲೋಶಿಯಸ್ ಗೊನ್ಸಾಗ ಅವರಂತೆ ಪ್ರತಿಯೊಬ್ಬರೂ ಮಾನವಕುಲಕ್ಕೆ ಸೇವೆಸಲ್ಲಿಸುವುದನ್ನೇ ತಮ್ಮ ಜೀವನದ ಗುರಿಯನ್ನಾಗಿಸಬೇಕು ಎಂದರು.




ಸಂತ ಅಲೋಶಿಯಸ್ ಸಂಸ್ಥೆಯ ನೂತನ ರೆಕ್ಟರ್ ಆಗಿ ಆಯ್ಕೆಯಾದ ಫಾ. ಬ್ರಾಯನ್ ಪಿರೇರಾ ಅವರನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ ಅವರನ್ನು ಗೌರವಿಸಲಾಯಿತು. ಸಾಧಕ ವಿದ್ಯಾರ್ಥಿ ಶೌರ್ಯ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ವೈಸ್ ಪ್ರಿನ್ಸಿಪಾಲ್ ಲಾರೆಲ್ ಡಿಸೋಜಾ ಹಾಗೂ ಸುರೇಶ್ಅಪರ್ಣಾಸುರೇಶ್, ಶಾಲಾ ಶೈಕ್ಷಣಿಕ ಸಂಯೋಜಕರಾದ ದೀಪ ಕರ್ಕಡಾ,ದೀಪ್ತಿ ಕರ್ಕಡಾ ಹಾಗೂ ಕ್ಯಾರೆಲ್ ರಾಡ್ರಿಗಸ್ ಹಾಗೂ ರಕ್ಷಕ-ಶಿಕ್ಷಕ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷರಾದ ರೀನಾ ನೊರೋನ್ಹಾ, ಕಾರ್ಯದರ್ಶಿ ಕ್ವೀನಿ ಫರ್ನಾಂಡೀಸ್ ಉಪಸ್ಥಿತರಿದ್ದರು.

Udayavani 23-06-2026

# ಕಂಬಾರರು ದೇಸೀ ಪರಂಪರೆಯ ಪ್ರತಿಪಾದಕರು: ಧನಂಜಯ ಕುಂಬ್ಳೆ

**ಮಹಾನಗರ, ಜೂ.22:** ಕನ್ನಡ ನವ್ಯ ಸಾಹಿತ್ಯ ಟಿ.ಎಸ್ ಎಲಿಯೆಟ್ ಮತ್ತು ಇತರೆ ಪಾಶ್ಚಾತ್ಯ ವಿದ್ವಾಂಸರ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿದ್ದಾಗ ಚಂದ್ರಶೇಖರ ಕಂಬಾರರು 'ಹೇಳತೇನ ಕೇಳ' ಮೂಲಕ ಭಾರತೀಯ ಪರಂಪರೆ ಮತ್ತು ದೇಸೀ ಜಾನಪದ ಸಂಸ್ಕೃತಿಯನ್ನು ಪ್ರತಿಪಾದಿಸಿದವರು. ನಮ್ಮಲ್ಲೇ ಶ್ರೀಮಂತವಾದ ಮೌಖಿಕ ಮತ್ತು ಸಮೃದ್ಧ ಸಾಹಿತ್ಯ ಇರುವಾಗ ಪಾಶ್ಚಾತ್ಯ ಚಿಂತನೆಗಳಿಗೆ ನಾವು ಯಾಕೆ ಮರುಳಾಗಬೇಕು ಎಂದು ಪ್ರಶ್ನೆ ಮಾಡಿದವರು ಎಂದು ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ। ಧನಂಜಯ ಕುಂಬ್ಳೆ ಹೇಳಿದರು.

ಅವರು ದ.ಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಕಾನೂನುಶಿಕ್ಷಣವಿಭಾಗದಸಭಾಂಗಣದಲ್ಲಿ ಹಮ್ಮಿಕೊಂಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರ ಕವಿ, ಕಾವ್ಯ ಸಾಹಿತ್ಯ ಪರಂಪರೆ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.



ಕಂಬಾರರ ಸಾಹಿತ್ಯದಲ್ಲಿ ಅನುಭವ ಮತ್ತು ನೆನಪುಗಳು ದಟ್ಟನಿರೂಪಣೆಯಿದ್ದು, ಜಾಗತೀಕರಣ, ಕಾಮ ಮತ್ತು ಸಾವಿನ ಕುರಿತ ಗಂಭೀರ ಜಿಜ್ಞಾಸೆಯಿದೆ. ಭಾರತವು ಬಹುಭಾಷೆ, ಜಾತಿ, ಸಂಸ್ಕೃತಿಗಳ ನಾಡು. ಅದರ ಮಹತ್ವವನ್ನು ಅವರು ಶಿವಾಪುರ ಎನ್ನುವ ವಿಶಿಷ್ಟ ಲೋಕವೊಂದರ ಸೃಷ್ಟಿಯ ಮೂಲಕ ತಮ್ಮ ಕಾವ್ಯ ಕಾದಂಬರಿಗಳಲ್ಲಿ ಮೂಡಿಸಿದ್ದಾರೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದ.ಕ ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ। ಎಂ.ಪಿ ಶ್ರೀನಾಥ್ ಯುವಜನತೆಗೆ ಕನ್ನಡ ಭಾಷೆ ಸಾಹಿತ್ಯದ ಅಭಿಮಾನ ಹುಟ್ಟಿಸುವ ಕಾರ್ಯಕ್ರಮಗಳನ್ನು ಸಾಹಿತ್ಯ ಪರಿಷತ್ತು ನಿರಂತರ ನಡೆಸುತ್ತಾ ಬರುತ್ತಿದೆ. ಶಿಕ್ಷಣ ಸಂಸ್ಥೆಗಳು ಇಂತಹ ಕಾರ್ಯಕ್ರಮಗಳಿಗೆ ಬೆಂಬಲವಾಗಿ ನಿಲ್ಲಬೇಕು. ಕನ್ನಡಕ್ಕೆ ಜ್ಞಾನಪೀಠ ತಂದುಕೊಟ್ಟ ಸಾಹಿತಿಗಳ ಕುರಿತು ಎಂಟು ಉಪನ್ಯಾಸಗಳನ್ನು ವಿವಿಧೆಡೆ ಸಾಹಿತ್ಯ ಪರಿಷತ್ತು ಸಂಘಟಿಸಿದೆ ಎಂದು ಹೇಳಿದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಶಿಕ್ಷಣ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ। ಫರೀಟಾ ವೇಗಸ್ ಉದ್ಘಾಟಿಸಿದರು. ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡೆಲ್ಲಾ ಲೋಬೋ, ಕಾರ್ಯಕ್ರಮದ ಸಂಯೋಜಕಿ ಉಪನ್ಯಾಸಕಿ ಸಂಧ್ಯಾ ಉಪಸ್ಥಿತರಿದ್ದರು. ಸಹಪ್ರಾಧ್ಯಾಪಕಿ ಡಾ। ವಿಜಯಲಕ್ಷ್ಮೀ ನಾಯಕ್ ಸ್ವಾಗತಿಸಿದರು. ವಿದ್ಯಾರ್ಥಿನಿ ಅಕ್ಷಿತಾ ವಂದಿಸಿದರು. ಮೇಘನಾ ಕುಂದಾಪುರ ನಿರೂಪಿಸಿದರು.



*Prajavani 22-06-2026*




ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕ್ಯಾಂಪಸ್
ಚಿತ್ರ: ಫಕ್ರುದ್ದೀನ್ ಎಚ್.

**ಕನ್ನಡ ಭಾಷೆಯ ಅಧ್ಯಯನಕ್ಕೆ ಉದ್ಯೋಗಾವಕಾಶ ಸೀಮಿತ ಎಂಬ ಮಾತಿಗೆ ಇನ್ನು ಜಾಗವಿಲ್ಲ. ಡಿಜಿಟಲ್ ಸ್ಪರ್ಶದೊಂದಿಗೆ ಕೌಶಲಕ್ಕೆ ಒತ್ತು ನೀಡಿ, ಕನ್ನಡವನ್ನು ವೃತ್ತಿ ಬದುಕಿನೊಂದಿಗೆ ಬೆಸೆಯಲಿದೆ, ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದಲ್ಲಿ ಆರಂಭವಾಗಲಿರುವ 'ಕನ್ನಡ ಎಂ.ಎ. ಪ್ರೊಫೆಷನಲ್' ಕೋರ್ಸ್.**

# ಕನ್ನಡ ಅಧ್ಯಯನಕ್ಕೆ ಹೊಸ ಮೆರುಗು

## ವೃತ್ತಿಬದುಕಿಗೆ ಕೊಂಡಿಯಾಗಲಿದೆ 'ಪ್ರೊಫೆಷನಲ್ ಕೋರ್ಸ್'

• ವಿಕ್ರಂ ಕಾಂತಿಕೆರೆ

ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆಯ ವಿಸ್ತೃತ ಅಧ್ಯಯನದ ಜೊತೆಯಲ್ಲಿ ಪುರಾಣಗಳ ಒಳಹೊಕ್ಕು ಹೊಸನೋಟ ಹುಡುಕುವ, ಸಾಹಿತಿಗಳು, ಸಾಹಿತ್ಯ ಮತ್ತು ಕನ್ನಡ ಚರಿತ್ರೆಯ ಬಗ್ಗೆ ಆಳವಾದ ಅಧ್ಯಯನ ಮಾಡುವ ಕನ್ನಡ ಸ್ನಾತಕೋತ್ತರ ಪದವಿಯಲ್ಲಿ ಡಿಜಿಟಲ್ ಸಂವಹನ, ಅನುವಾದ ಉದ್ಯಮದ ಪರಿಚಯ, ಸ್ಕ್ರಿಪ್ಟ್ ರೈಟಿಂಗ್ ಪರಿಣತಿ, ಪ್ರತಿಭೆ ಪ್ರದರ್ಶನಕ್ಕೆ ಭೂಮಿಕೆ ಎಲ್ಲವೂ ಒದಗಿಬಂದರೆ ಹೇಗೆ?

ಹೀಗೊಂದು ಪ್ರಶ್ನೆಯು ಪದವಿಯಲ್ಲಿ ಕನ್ನಡ ಐಚ್ಛಿಕ ವಿಷಯ ಓದಿ ಸ್ನಾತಕೋತ್ತರದತ್ತ ಮುಖ ಮಾಡುವ ಬಹುತೇಕರಲ್ಲಿ ಮೂಡದೇ ಇರಲಾರದು– ವಿಶೇಷವಾಗಿ ಇಂದಿನ ವೃತ್ತಿಪರ ಕೋರ್ಸ್‌ಗಳ ಕಾಲದಲ್ಲಿ.

ಇನ್ನು ಮುಂದೆ ಇದು ಪ್ರಶ್ನೆಯಾಗಿಯೇ ಉಳಿದುಕೊಳ್ಳುವುದಿಲ್ಲ. ಕನ್ನಡ ಎಂ.ಎ ಓದುವವರಿಗೆ 'ಕನ್ನಡ ಸ್ನಾತಕೋತ್ತರ ಪ್ರೊಫೆಷನಲ್' ಎಂಬ ಪರಿಕಲ್ಪನೆಯೊಂದಿಗೆ ಹೊಸ ಪಠ್ಯಕ್ರಮ ರೂಪಿಸಿದೆ ಮಂಗಳೂರಿನ ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ. ಈ ಶೈಕ್ಷಣಿಕ ವರ್ಷದಿಂದಲೇ ಅಂದರೆ ಜುಲೈ ತಿಂಗಳಲ್ಲಿ ಇದು ಜಾರಿಗೆ ಬರಲಿದೆ.

ಸಾಹಿತ್ಯ ವಿಷಯದ ಅಧ್ಯಯನಕ್ಕೆ ಇತ್ತೀಚೆಗೆ ವಿದ್ಯಾರ್ಥಿಗಳು ಬರುವುದು ಕಡಿಮೆ. ಅದಕ್ಕೆ ಮುಖ್ಯ ಕಾರಣ ಉದ್ಯೋಗದ ಸಮಸ್ಯೆ. ಕನ್ನಡ ಓದಿದರೆ ಅಧ್ಯಾಪನದಂಥ ಸೀಮಿತ ಉದ್ಯೋಗ ಬಿಟ್ಟರೆ ವಿಸ್ತೃತ ಅವಕಾಶ ಇಲ್ಲ ಎಂಬ ಕಾರಣಕ್ಕೆ ಅತ್ತ ತಲೆ ಹಾಕುವವರು ವಿರಳ. ಹೀಗಾಗಿ, ಕನ್ನಡ ಮತ್ತು ವೃತ್ತಿಯ ನಡುವಿನ ಕೊಂಡಿಯಾಗುವುದು ಹೊಸ ವಿನ್ಯಾಸದ ಉದ್ದೇಶ ಎಂಬುದು ವಿಶ್ವವಿದ್ಯಾಲಯದ ಆಶಯ.

'ವರ್ತಮಾನದಲ್ಲಿ ಕನ್ನಡವನ್ನು ಬಳಸಿಕೊಂಡು ಡಿಜಿಟಲ್ ಮಾಧ್ಯಮ ಹಾಗೂ ನವಮಾಧ್ಯಮದ ಮೂಲಕ ಕನ್ನಡದ ಉದ್ಯೋಗಾವಕಾಶಗಳನ್ನು ಪಡೆದುಕೊಳ್ಳಲು ಅಪಾರ ಸಾಧ್ಯತೆಗಳಿವೆ. ಆದರೆ ಸೂಕ್ತ ತರಬೇತಿ ಸಿಗುತ್ತಿಲ್ಲ. ಕನ್ನಡ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಯ ಜ್ಞಾನದೊಂದಿಗೆ ಆಧುನಿಕ ಡಿಜಿಟಲ್ ತಂತ್ರಜ್ಞಾನ ಹಾಗೂ ಕೌಶಲಗಳಲ್ಲಿ ಪರಿಣತಿಯೂ ಇದ್ದರೆ ಉದ್ಯೋಗಾವಕಾಶದ ಹಾದಿ ಸುಗಮವಾಗುತ್ತದೆ. ಈ ದೃಷ್ಟಿಯಿಂದ ಪ್ರೊಫೆಷನಲ್ ಕನ್ನಡ ಎಂ.ಎ ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಕನ್ನಡ ವಿಭಾಗದ ಮುಖ್ಯಸ್ಥ ದಿನೇಶ್ ನಾಯಕ್ ಹೇಳುತ್ತಾರೆ.

'ಕನ್ನಡ ಎಂ.ಎ ಪ್ರೊಫೆಷನಲ್‌ಗೆ ಸೇರಲು ಪದವಿ ತರಗತಿಯ ಅಂತಿಮ ಫಲಿತಾಂಶಕ್ಕಾಗಿ ಕಾಯುವುದು ಬೇಡ, ಪ್ರಥಮ ಮತ್ತು ದ್ವಿತೀಯ ಪದವಿಯ ಅಂಕಪಟ್ಟಿಗಳೊಂದಿಗೆ ಬಂದರೆ ಪ್ರವೇಶ ಪಡೆಯಬಹುದು. ಕನ್ನಡ ಭಾಷೆ ಮತ್ತು ನೆಲದ ಸತ್ವ ಉಳಿಸಿಕೊಂಡೇ ಡಿಜಿಟಲ್ ಕಮ್ಯುನಿಕೇಷನ್, ಸಣ್ಣ ಮತ್ತು ದೊಡ್ಡ ಒಟಿಟಿ, ನವಮಾಧ್ಯಮ, ಅನುವಾದ ಉದ್ಯಮ, ಕಂಟೆಂಟ್ ಬರಹ, ಎಐ ಆಧಾರಿತ ಎಂಜಿನಿಯರಿಂಗ್, ಸ್ಕ್ರಿಪ್ಟ್ ಬರಹ ಮತ್ತು ರಂಜನೀಯ ವೇದಿಕೆಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಗೆ ಅನುಕೂಲಕರ ರೀತಿಯಲ್ಲಿ ಪಠ್ಯಕ್ರಮ ವಿನ್ಯಾಸಗೊಳಿಸಲಾಗಿದೆ' ಎನ್ನುತ್ತಾರೆ ಅವರು.

ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್‌ಗಳು ಸಾಕಷ್ಟು ಇವೆ. ಭಾಷಾ ಪ್ರಯೋಗಾಲಯ ಇದೆ. ನೀನಾಸಂನಲ್ಲಿ ತರಬೇತಿ ಪಡೆದು ರಂಗಭೂಮಿ, ಚಲನಚಿತ್ರ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಂದ ಕನ್ನಡ ವಿಭಾಗವು ಸಮೃದ್ಧವಾಗಿದೆ. ರೇಡಿಯೊ ಸಾರಂಗ್ ಇದೆ, ಮೊಸ್ಕನಿ ಕಲಾ ಗ್ಯಾಲರಿ, ಪ್ರದರ್ಶನಾಲಯ, ರಂಗಮಂದಿರದಂತಹ ಸೌಲಭ್ಯಗಳಿಂದ ತುಂಬಿರುವ ವಿಶ್ವವಿದ್ಯಾಲಯದ ಕ್ಯಾಂಪಸ್ ಪೂರ್ತಿ ಸೃಜನಶೀಲತೆಗೆ ತೆರೆದುಕೊಂಡಿದೆ. ಇದೆಲ್ಲವನ್ನೂ ಬಳಸಿಕೊಂಡು ಕನ್ನಡವನ್ನು ವೃತ್ತಿಪರಗೊಳಿಸುವ ಉದ್ದೇಶ ಕನ್ನಡ ವಿಭಾಗದ್ದು.

'ಕೌಶಲಗಳನ್ನು ವೃತ್ತಿಪರವಾಗಿ ಬೆಳೆಸುವುದಕ್ಕಾಗಿ ಹೊರಗಿನ ಸಂಪನ್ಮೂಲ ವ್ಯಕ್ತಿಗಳನ್ನೂ ಸೇರಿಸಿಕೊಂಡು ಪಠ್ಯಕ್ರಮ ರೂಪಿಸಲಾಗಿದೆ. ಸಿನಿಮಾ ನಿರ್ದೇಶಕ ಅಭಯಸಿಂಹ ಮೊದಲಾದವರು ವಿಭಾಗದೊಂದಿಗೆ ಇದ್ದು ಕೌಶಲ ತರಬೇತಿ ನೀಡಲಿದ್ದಾರೆ. ಕೋರ್ಸ್ ಒಂದನ್ನು ವೃತ್ತಿಪರವಾಗಿ ಬೆಳೆಸುವುದು ಮತ್ತು ಬಳಸುವುದು ಹೇಗೆ ಎಂದು ಅರಿತುಕೊಂಡವರು ವಿಭಾಗದ ಮತ್ತು ಕ್ಯಾಂಪಸ್‌ನ ಹೊರಗೆ ಅನೇಕ ಮಂದಿ ಇದ್ದಾರೆ. ಅವರನ್ನು ಸಂಪನ್ಮೂಲವಾಗಿ ಬಳಸಿಕೊಳ್ಳಲಾಗುವುದು' ಎಂದು ವಿಭಾಗದ ಅಧ್ಯಾಪಕ ಮಹಾಲಿಂಗ ಭಟ್ ಕೆ. ವಿವರಿಸಿದರು.

### ಹೀಗೆ ಅರ್ಜಿ ಸಲ್ಲಿಸಿ

https://staloysius.edu.in/apply-online ಅಥವಾ https://pgadmissions.staloysius.edu.in/regis ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ: ದಿನೇಶ್ ನಾಯಕ್ (9449255056), ಮಹಾಲಿಂಗ ಭಟ್ ಕೆ. (9449615469), ಕ್ರಿಸ್ಟೋಫರ್ ನೀನಾಸಂ (9113226234), ಪ್ರಶಾಂತಿ ಶೆಟ್ಟಿ (9972261201)

### ಅರ್ಹತೆ ಏನು?

• ಕನಿಷ್ಠ ಶೇಕಡ 55ರಷ್ಟು ಅಂಕಗಳೊಂದಿಗೆ ಯಾವುದೇ ಪದವಿ ಪಾಸಾಗಿದ್ದು, ಕನ್ನಡ ಭಾಷೆಯಲ್ಲಿ ಓದಲು, ಬರೆಯಲು ಮತ್ತು ಮಾತನಾಡಲು ಗೊತ್ತಿರಬೇಕು.

### ಸೆಮಿಸ್ಟರ್‌ಗಳಲ್ಲಿ ಏನೇನಿದೆ?

• ಭಾಷೆಯ ಹೊಸ ಸಾಫ್ಟ್‌ವೇರ್ • ಆಧುನಿಕ ಡಿಜಿಟಲ್ ಸಂವಹನ ತಂತ್ರಜ್ಞಾನ • ನವ ಪತ್ರಿಕೋದ್ಯಮ • ಕೃತಕ ಬುದ್ಧಿಮತ್ತೆ, ಪ್ರಾಮ್ಟ್ ಎಂಜಿನಿಯರಿಂಗ್ • ಸಾಂಸ್ಕೃತಿಕ ಪ್ರವಾಸೋದ್ಯಮ • ಕನ್ನಡಪರ ಜ್ಞಾನಕೋಶ ನಿರ್ಮಾಣ • ಪ್ರಮುಖ ಪತ್ರಿಕೆಗಳಾಗಿ ಐಎಎಸ್ ಪರೀಕ್ಷೆಯ ಕನ್ನಡ ಸಿಲೆಬಸ್ • ಯುಜಿಸಿ ನೆಟ್ ಕನ್ನಡ ಸಿಲೆಬಸ್‌ನ ಮುಖ್ಯಭಾಗ • ಆಧುನಿಕ, ಮಧ್ಯಕಾಲೀನ, ಪ್ರಾಚೀನ ಕನ್ನಡ ಸಾಹಿತ್ಯ • ಕನ್ನಡದ ಸಾಂಸ್ಕೃತಿಕ ಇತಿಹಾಸ • ಕನ್ನಡ ಛಂದಸ್ಸು, ಭಾಷಾ ವಿಜ್ಞಾನ, ವ್ಯಾಕರಣ • ಕಾವ್ಯಮೀಮಾಂಸೆ • ಜಾನಪದ ಅಧ್ಯಯನ • ಸಂಶೋಧನೆಯ ಸ್ವರೂಪ, • ಅನುವಾದ ಉದ್ಯಮ • ಬರವಣಿಗೆ • ರಂಗ-ಚಿತ್ರಸ್ಕ್ರಿಪ್ಟ್ • ರಂಗ ಪ್ರಸ್ತುತಿ...

### ನಾಗರಿಕ ಸೇವೆಗೂ ತರಬೇತಿ

ಐಎಎಸ್ ಪರೀಕ್ಷೆ ಬರೆಯಲು ಸಿದ್ಧತೆ ನಡೆಸುವವರಿಗೂ ಅನುಕೂಲ ಆಗುವ ವಿಷಯಗಳನ್ನು 'ಕನ್ನಡ ಸ್ನಾತಕೋತ್ತರ ಪ್ರೊಫೆಷನಲ್' ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಸ್ನಾತಕೋತ್ತರ ತರಗತಿ ಮುಗಿಯುವಷ್ಟರಲ್ಲಿ ಐಎಎಸ್ ಕನ್ನಡದ ಸಿಲೆಬಸ್ ಮತ್ತು ಪಠ್ಯಪುಸ್ತಕಗಳನ್ನು ವಿಸ್ತಾರವಾಗಿ ಕಲಿತು ಮುಗಿಸಲು ಇಲ್ಲಿ ಅವಕಾಶ ಇದೆ.

**ಮಹಾಲಿಂಗ ಭಟ್ ಕೆ.**, ಅಧ್ಯಾಪಕ, ಕನ್ನಡ ವಿಭಾಗ, ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯ, ಮಂಗಳೂರು

Publication Date

The Hindu 23-06-2026

# UGC grants Category-I status to St. Aloysius University

**The Hindu Bureau**
MANGALURU

St. Aloysius (Deemed to be University), Mangaluru, has secured the Category-I status under the University Grants Commission (UGC) Graded Autonomy Regulations, according to the university's Vice-Chancellor Praveen Martis.

Addressing presspersons here on Monday he said that the category has placed the university among an elite group of India's highest-performing higher educational institutions.

He said the institution becomes the second Deemed to be University in Karnataka to be granted Category-I status by the UGC. The other one being S-VYASA, Bengaluru.

Among the 157 Deemed to be Universities in the country, only 26 institutions have earned Category-I status and among 1,292 universities in the country only about 45 universities have earned Category-I status, Mr. Martis said.

The Category-I recognition has been conferred based on the University's performance in quality assessment and accreditation. The university holds a NAAC A++ Grade with a CGPA of 3.67 on a four-point scale.

Under the UGC Regulations, Category-I universities enjoy substantial freedom in academic decision-making and institutional development. The university can introduce new academic programmes, departments, schools, centres, diploma courses, certificate programmes, and interdisciplinary initiatives without requiring prior approval from the UGC. This flexibility will allow St. Aloysius to rapidly respond to emerging disciplines, industry requirements, technological advancements, and societal needs, the Vice-Chancellor said.

**Institution becomes the second deemed to be university in State to be granted Category-I status by the UGC**

The university can also establish constituent units and off-campus centres within its geographical jurisdiction without prior approval, thereby expanding access to quality higher education, he said.

One of the most transformative aspects of Category-I autonomy is the freedom to establish research parks, incubation centres, innovation hubs, entrepreneurship ecosystems, and university-society linkage centres.

The regulations further empower the university to recruit internationally renowned faculty members from globally ranked institutions, thereby enriching academic quality and strengthening internationalization efforts.

The university can also appoint foreign faculty members up to 20% over and above its sanctioned faculty strength, creating opportunities for global knowledge exchange and world-class academic engagement, he said.

The Category-I status also enhances the university's ability to attract international students by permitting admissions beyond the approved domestic intake, the Vice-Chancellor said.

Another significant benefit is the freedom to establish academic collaborations with leading international universities without prior UGC approval, provided they meet prescribed global ranking criteria. This provision will facilitate the development of joint research projects, collaborative academic programmes, faculty exchanges, student mobility initiatives, dual-degree programmes, twinning arrangements, and international centres of excellence, Mr. Martis said.

The university also gains greater flexibility to introduce skill-based programmes aligned with the National Skills Qualification Framework (NSQF), offer innovative certificate and diploma programmes, establish industry-oriented learning pathways, and explore opportunities in open and distance learning, he said.

Universities under this category are automatically deemed to be covered under Section 12B of the UGC Act and are exempted from several routine regulatory approvals and inspections, the Vice-Chancellor said.

*Samyuktha Karnataka 23-06-2026*

# ಯುಜಿಸಿ ಪ್ರತಿಷ್ಠಿತ ಕೆಟಗರಿ–1 ಸ್ಥಾನಮಾನ

**ಸಂ.ಕ.ಸಮಾಚಾರ, ಮಂಗಳೂರು**

ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ಯುಜಿಸಿ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ–1 ಸ್ಥಾನಮಾನವನ್ನು ಪಡೆಯುವ ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ. ಈ ಸ್ಥಾನಮಾನ ಪಡೆದ ರಾಜ್ಯದ 2ನೆ ಖಾಸಗಿ ಪರಿಗಣಿತ ವಿವಿ ಎಂಬ ಹೆಗ್ಗಳಿಕೆಯನ್ನು ಪಡೆದಿದೆ ಎಂದು ವಿವಿಯ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ತಿಳಿಸಿದ್ದಾರೆ.

**ಅಲೋಶಿಯಸ್**

ನಗರದ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮಾನ್ಯತೆ ವಿಶ್ವವಿದ್ಯಾನಿಲಯದ 146 ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ, ನಾವೀನ್ಯತೆ, ಸಂಶೋಧನೆ ಮತ್ತು ರಾಷ್ಟ್ರ ನಿರ್ಮಾಣದ ಅದ್ಭುತ ಪ್ರಯಾಣದಲ್ಲಿ ಒಂದು ನಿರ್ಣಾಯಕ ಹಂತವಾಗಿದೆ. ಭಾರತದಲ್ಲಿ ಪ್ರಸ್ತುತ 1,292 ವಿವಿ.ಗಳಿದ್ದು, ಅದರಲ್ಲಿರುವ 157 ಪರಿಗಣಿತ ವಿಶ್ವವಿದ್ಯಾಲಯಗಳಲ್ಲಿ, ಕೇವಲ 26 ಸಂಸ್ಥೆಗಳು ಕೆಟಗರಿ–1 ಸ್ಥಾನಮಾನವನ್ನು ಗಳಿಸಿವೆ ಎಂದು ಹೇಳಿದರು.

ಸಂತ ಅಲೋಶಿಯಸ್ ವಿವಿಯು ಶೈಕ್ಷಣಿಕ ವ್ಯವಸ್ಥೆಯಲ್ಲಿ ಯುಜಿಸಿಯ ಶ್ರೇಣೀಕೃತ ಸ್ವಾಯತ್ತತೆ ಚೌಕಟ್ಟಿನಡಿಯಲ್ಲಿ ಕಲ್ಪಿಸಲಾದ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸಾಧಿಸಿದ್ದಕ್ಕಾಗಿ ಈ ಸ್ಥಾನಮಾನವನ್ನು ಪಡೆದಿದೆ. ಇದರಿಂದಾಗಿ ಪಠ್ಯಕ್ರಮ ವಿನ್ಯಾಸ, ಬೋಧನೆ–ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ನಾವೀನ್ಯತೆ, ವಿದ್ಯಾರ್ಥಿಗಳ ಬೆಂಬಲ, ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಾಂಸ್ಥಿಕ ಮೌಲ್ಯಗಳು ಸೇರಿದಂತೆ ಉನ್ನತ ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲೂ ವಿಶೇಷತೆಗೆ ನೆರವಾಗಲಿದೆ.

ಯುಜಿಸಿ ನಿಯಮಗಳ ಅಡಿಯಲ್ಲಿ, ಕೆಟಗರಿ–1 ವಿ.ವಿ.ಗಳು ಶೈಕ್ಷಣಿಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಸ್ವತಂತ್ರ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲಿದೆ. ಯುಜಿಸಿಯಿಂದ ಪೂರ್ವಾನುಮೋದನೆ ಅಗತ್ಯವಿಲ್ಲದೆಯೇ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು, ಹೊಸ ವಿಭಾಗಗಳು, ಹೊಸ ಶಾಲೆಗಳು, ಹೊಸ ಕೇಂದ್ರಗಳು, ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳು, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಉಪಕ್ರಮಗಳನ್ನು ಪರಿಚಯಿಸಬಹುದಾಗಿದೆ. ಮಾತ್ರವಲ್ಲದೆ, ಜಂಟಿ ಸಂಶೋಧನಾ ಯೋಜನೆಗಳು, ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು, ಅಧ್ಯಾಪಕರ ವಿನಿಮಯಗಳು, ವಿದ್ಯಾರ್ಥಿ ವಿನಿಮಯಗಳು, ದ್ವಿ–ಪದವಿ ಕಾರ್ಯಕ್ರಮಗಳು, ಮುಂತಾದವುಗಳನ್ನು ನೀಡಲು ಈ ಸ್ಥಾನಮಾನ ಸಹಕಾರಿಯಾಗಲಿದೆ ಎಂದು ರೆ.ಡಾ.ಪ್ರವೀಣ್ ಮಾರ್ಟಿಸ್ ವಿವರಿಸಿದರು.



ಕುಲಸಚಿವ ಡಾ.ರೊನಾಲ್ಡ್ ನಜರೆತ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ದಿನೇಶ್ ನಾಯಕ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ನಾಯಕ್ ಉಪಸ್ಥಿತರಿದ್ದರು.

*Prajavani 23-06-2026*

# ಅಲೋಶಿಯಸ್ ವಿ.ವಿ.ಗೆ ಯುಜಿಸಿ ಕೆಟಗರಿ–1 ಸ್ಥಾನಮಾನ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ಯುಜಿಸಿ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಕೆಟಗರಿ-1 ಸ್ಥಾನ ಪಡೆದಿದ್ದು, ಇದು ಸಂಸ್ಥೆಗೆ ಮತ್ತೊಂದು ಮೈಲುಗಲ್ಲು. ಈ ಮಾನ್ಯತೆಯು ಸಂಸ್ಥೆಯ 146 ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ, ನಾವೀನ್ಯತೆ, ಸಂಶೋಧನೆಯ ಫಲ' ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರವೀಣ್ ಮಾರ್ಟಿಸ್ ಸೋಮವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತದಲ್ಲಿ ಪ್ರಸ್ತುತ 1,292 ವಿಶ್ವವಿದ್ಯಾಲಯಗಳಿದ್ದು, ಅವುಗಳಲ್ಲಿ 157 ಪರಿಗಣಿತ ವಿಶ್ವವಿದ್ಯಾಲಯಗಳು. ಪರಿಗಣಿತ ವಿಶ್ವವಿದ್ಯಾಲಯಗಳಲ್ಲಿ, ಕೇವಲ 26 ಸಂಸ್ಥೆಗಳು ಕೆಟಗರಿ-1 ಸ್ಥಾನಮಾನ ಗಳಿಸಿವೆ. ಕರ್ನಾಟಕದಲ್ಲಿ ಎರಡು ವಿಶ್ವವಿದ್ಯಾಲಯಗಳಿಗೆ ಮಾತ್ರ ಈ ಸ್ಥಾನಮಾನ ಸಿಕ್ಕಿದ್ದು, ಅವುಗಳಲ್ಲಿ ಸೇಂಟ್ ಅಲೋಶಿಯಸ್ ವಿ.ವಿ.ಯು ಒಂದು. ಯುಜಿಸಿಯ ಶ್ರೇಣೀಕೃತ ಸ್ವಾಯತ್ತ ಚೌಕಟ್ಟಿನಡಿ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಮಾನದಂಡಗಳನ್ನು ಸಾಧಿಸಿದ್ದಕ್ಕಾಗಿ ಈ ಸ್ಥಾನಮಾನ ದೊರೆತಿದೆ' ಎಂದರು.



ಪ್ರವೀಣ್ ಮಾರ್ಟಿಸ್

ಪಠ್ಯಕ್ರಮ ವಿನ್ಯಾಸ, ಬೋಧನೆ-ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ನಾವೀನ್ಯತೆ, ವಿದ್ಯಾರ್ಥಿಗಳ ಬೆಂಬಲ, ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಾಂಸ್ಥಿಕ ಮೌಲ್ಯಗಳು ಸೇರಿದಂತೆ ಉನ್ನತ ಶಿಕ್ಷಣದ ಎಲ್ಲ ಆಯಾಮಗಳನ್ನು ಪರಿಗಣಿಸಿ ಈ ಮಾನ್ಯತೆ ನೀಡಲಾಗುತ್ತದೆ. ಕೆಟಗರಿ–1 ಸ್ಥಾನ ದೊರೆತಾಗ, ಶೈಕ್ಷಣಿಕ ನಿರ್ಧಾರ ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಸ್ವಾತಂತ್ರ್ಯ ದೊರೆಯುತ್ತದೆ. ಯುಜಿಸಿಯಿಂದ ಪೂರ್ವ ಅನುಮೋದನೆ ಇಲ್ಲದೆ ಹೊಸ ಶೈಕ್ಷಣಿಕ ಕಾರ್ಯಕ್ರಮ, ಹೊಸ ವಿಭಾಗ, ಹೊಸ ಕೇಂದ್ರಗಳು, ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳು, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಕಾರ್ಯಕ್ರಮಗಳನ್ನು ಪರಿಚಯಿಸಬಹುದು ಎಂದು ಅವರು ಹೇಳಿದರು.

ಕುಲಸಚಿವ ರೊನಾಲ್ಡ್ ನಜರೆತ್, ದಿನೇಶ್ ನಾಯಕ್, ಚಂದ್ರಕಲಾ ನಾಯಕ್ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

*Deccan Herald 23-06-2026*

# St Aloysius varsity awarded UGC Category-I Status

MANGALURU, DHNS

The St Aloysius Deemed-to-be-University, Mangaluru, has secured Category-I Status from the University Grants Commission (UGC).

With this achievement, the varsity becomes the second Deemed-to-be-University in the state to be granted Category-I status by the UGC, said Vice Chancellor Rev Dr Praveen Martis.

India currently has 1,292 universities, comprising 57 Central Universities, 521 State Universities, 157 Deemed-to-be-Universities, and 557 State Private Universities. Among the 157 Deemed-to-be-Universities in the country, only 26 institutions have earned the Category-I status and among 1,292 universities in the country only about 45 universities have earned the Category -I status, he told mediapersons.

The Category-I recognition has been conferred based on the university's performance in quality assessment and accreditation. The university holds the NAAC A++ Grade with an outstanding CGPA of 3.67 on a four-point scale.

Registrar Dr Ronald Nazareth said the conferment of Category-I status represented much more than a recognition of institutional excellence. "It provides unprecedented academic and administrative autonomy that will enable the university to innovate and expand more effectively. It can introduce new academic programmes, departments, schools, centres, diploma courses, certificate programmes, and interdisciplinary initiatives without requiring prior approval from the UGC. It can also introduce online programmes. The varsity can also establish constituent units and off-campus centres within its geographical jurisdiction without prior approval, thereby expanding access to quality education."

Further, it also provides autonomy to establish research parks, incubation centres, innovation hubs, entrepreneurship ecosystems, and university-society linkage centres and collaborate with leading international universities without the prior UGC approval. Further, university can also admit international students by permitting admissions beyond the approved domestic intake. The university also gains greater flexibility to introduce skill-based programmes aligned with the National Skills Qualification Framework (NSQF), offer innovative certificate and diploma programmes, establish industry-oriented learning pathways, and explore opportunities in open and distance learning.




St Aloysius varsity Vice chancellor Rev Fr Praveen Martis speaks to mediapersons in Mangaluru.

*Vijayavani 23-06-2026*

# ಸೇಂಟ್ ಅಲೋಶಿಯಸ್‌ಗೆ ಯುಜಿಸಿ ಕೆಟಗರಿ-1 ಸ್ಥಾನ

**ಮಂಗಳೂರು:** ಇಲ್ಲಿನ ಸೇಂಟ್ ಅಲೋಶಿಯಸ್ ವಿಶ್ವವಿದ್ಯಾಲಯ(ಪರಿಗಣಿತ ವಿಶ್ವವಿದ್ಯಾಲಯ ಡೀಮ್ಡ್ ಟು ಬಿಯೂನಿವರ್ಸಿಟಿ)ಧನವಿನಿಯೋಗಆಯೋಗ(ಯುಜಿಸಿ) ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ-1 ಸ್ಥಾನ ಪಡೆದಿದ್ದು, ಇದು ಸಂಸ್ಥೆಯ ಐತಿಹಾಸಿಕ ಸಾಧನೆ ಎಂದು ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್. ಜೆ. ತಿಳಿಸಿದರು.

**■ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಭಿಪ್ರಾಯ**

ದೇಶದಲ್ಲಿ 1,292 ವಿಶ್ವವಿದ್ಯಾಲಯಗಳಿದ್ದು, ಅದರಲ್ಲಿರುವ 157 ಪರಿಗಣಿತ ವಿಶ್ವವಿದ್ಯಾಲಯಗಳಲ್ಲಿ 26 ಸಂಸ್ಥೆಗಳು ಕೆಟಗರಿ-1 ಸ್ಥಾನ ಗಳಿಸಿದೆ. ಸೇಂಟ್ ಅಲೋಶಿಯಸ್ ವಿವಿ ಯುಜಿಸಿಯ ಶ್ರೇಣೀಕೃತ ಸ್ವಾಯತ್ತತೆ ಚೌಕಟ್ಟಿನಡಿ ಕಲ್ಪಿಸಲಾದ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸಾಧಿಸಿದಕ್ಕಾಗಿ ಈ ಸ್ಥಾನ ಸಿಕ್ಕಿದೆ. ಕರ್ನಾಟಕದಲ್ಲಿ 17 ಪರಿಗಣಿತ ವಿಶ್ವವಿದ್ಯಾಲಯಗಳಿದ್ದು, ಇದರಲ್ಲಿ 2 ವಿವಿಗಳು ಮಾತ್ರ ಕೆಟಗರಿ-1 ಸ್ಥಾನಮಾನ ಪಡೆದಿದೆ. ಅದರಲ್ಲಿ ಸೇಂಟ್ ಅಲೋಶಿಯಸ್ ವಿವಿಯೂ ಒಂದು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಶೈಕ್ಷಣಿಕ ಪಠ್ಯಕ್ರಮ ವಿನ್ಯಾಸ, ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ನಾವೀನ್ಯ, ವಿದ್ಯಾರ್ಥಿಗಳ ಬೆಂಬಲ, ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಾಂಸ್ಥಿಕ ಮೌಲ್ಯಗಳು ಸೇರಿದಂತೆ ಉನ್ನತ ಶಿಕ್ಷಣದ ಎಲ್ಲ ಆಯಾಮಗಳಲ್ಲಿ ಶ್ರೇಷ್ಠತೆಯನ್ನು ಅಳೆಯಲಾಗುತ್ತದೆ. ಯುಜಿಸಿ ನಿಯಮಗಳ ಅಡಿಯಲ್ಲಿ ಕೆಟಗರಿ-1 ವಿಶ್ವವಿದ್ಯಾಲಯಗಳು ಶೈಕ್ಷಣಿಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಗಣನೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತವೆ. ಅಂದರೆ ವಿಶ್ವವಿದ್ಯಾಲಯಗಳು ಯುಜಿಸಿಯಿಂದ ಪೂರ್ವಾನುಮೋದನೆ ಅಗತ್ಯವಿಲ್ಲದೆಯೇ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು, ಹೊಸ ವಿಭಾಗಗಳು, ಹೊಸ ಶಾಲೆಗಳು, ಹೊಸ ಕೇಂದ್ರಗಳು, ಡಿಪ್ಲೊಮಾ ಅಥವಾ ಸರ್ಟಿಫಿಕೆಟ್ ಕೋರ್ಸ್‌ಗಳು, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಉಪಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದರು.

ಅಲೋಶಿಯಸ್ ವಿಶ್ವವಿದ್ಯಾಲಯ ಕುಲಸಚಿವ ಡಾ.ರೊನಾಲ್ಡ್ ನಜರೆತ್, ಕನ್ನಡ ವಿಭಾಗ ಮುಖ್ಯಸ್ಥ ದಿನೇಶ್, ಪಿಆರ್‌ಒ ಚಂದ್ರಕಲಾ ಸುದ್ದಿಗೋಷ್ಠಿಯಲ್ಲಿದ್ದರು.

*Hosadigantha 23-06-2026*

# ಅಲೋಶಿಯಸ್ ವಿವಿಗೆ ಪ್ರತಿಷ್ಠಿತ ಯುಜಿಸಿ ಕೆಟಗರಿ-1 ಸ್ಥಾನಮಾನ

**ಮಂಗಳೂರು:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ಯುಜಿಸಿ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ-1 ಸ್ಥಾನಮಾನವನ್ನು ಪಡೆಯುವ ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ. ಈ ಸ್ಥಾನಮಾನ ಪಡೆದ ರಾಜ್ಯದ 2ನೇ ಖಾಸಗಿ ಪರಿಗಣಿತ ವಿವಿ ಎಂಬ ಹೆಗ್ಗಳಿಕೆಯನ್ನು ಅಲೋಶಿಯಸ್ ವಿವಿ ಪಡೆದಿದೆ ಎಂದು ವಿವಿಯ ಕುಲಪತಿ ವಂ. ಡಾ. ಪ್ರವೀಣ್ ಮಾರ್ಟಿಸ್ ತಿಳಿಸಿದರು.

ಈ ಮಾನ್ಯತೆ ಅಲೋಶಿಯಸ್ ಶಿಕ್ಷಣ ಸಂಸ್ಥೆಯ 146 ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ, ನಾವೀನ್ಯತೆ, ಸಂಶೋಧನೆ ಮತ್ತು ರಾಷ್ಟ್ರ ನಿರ್ಮಾಣದ ಅದ್ಭುತ ಪ್ರಯಾಣದಲ್ಲಿ ಒಂದು ನಿರ್ಣಾಯಕ ಹಂತವಾಗಿದೆ. ಭಾರತದಲ್ಲಿ ಪ್ರಸ್ತುತ 1,292 ವಿವಿಗಳಿದ್ದು, ಅದರಲ್ಲಿರುವ 157 ಪರಿಗಣಿತ ವಿಶ್ವವಿದ್ಯಾಲಯಗಳಲ್ಲಿ, ಕೇವಲ 26 ಸಂಸ್ಥೆಗಳು ಕೆಟಗರಿ-1 ಸ್ಥಾನಮಾನ ಗಳಿಸಿವೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

**ಅತ್ಯುನ್ನತ ಮಾನದಂಡದ ಪಾಲನೆ**

ಸಂತ ಅಲೋಶಿಯಸ್ ವಿವಿಯು ಶೈಕ್ಷಣಿಕ ವ್ಯವಸ್ಥೆಯಲ್ಲಿ ಯುಜಿಸಿಯ ಶ್ರೇಣೀಕೃತ ಸ್ವಾಯತ್ತತೆ ಚೌಕಟ್ಟಿನಡಿಯಲ್ಲಿ ಕಲ್ಪಿಸಲಾದ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸಾಧಿಸಿದ್ದಕ್ಕಾಗಿ ಈ ಸ್ಥಾನಮಾನ ಪಡೆದಿದೆ. ಇದರಿಂದಾಗಿ ಪಠ್ಯಕ್ರಮ ವಿನ್ಯಾಸ, ಬೋಧನೆ-ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ನಾವೀನ್ಯತೆ, ವಿದ್ಯಾರ್ಥಿ ಗಳ ಬೆಂಬಲ, ಸಮುದಾಯ ತೊಡಗಿಸಿ ಕೊಳ್ಳುವಿಕೆ, ಸಾಂಸ್ಥಿಕ ಮೌಲ್ಯ ಸಹಿತ ಉನ್ನತ ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲೂ ವಿಶೇಷತೆಗೆ ನೆರವಾಗಲಿದೆ ಎಂದರು.

**ಸ್ವತಂತ್ರ ನಿರ್ಧಾರಕ್ಕೆ ಅವಕಾಶ**

ಯುಜಿಸಿ ನಿಯಮಗಳ ಅಡಿಯಲ್ಲಿ, ಕೆಟಗರಿ-1 ವಿಶ್ವವಿದ್ಯಾಲಯಗಳು ಶೈಕ್ಷಣಿಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಸ್ವತಂತ್ರ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲಿದೆ ಎಂದು ವಂ. ಡಾ. ಪ್ರವೀಣ್ ಮಾರ್ಟಿಸ್ ಯುಜಿಸಿಯಿಂದ ಪೂರ್ವಾನುಮೋದನೆ ಅಗತ್ಯವಿಲ್ಲದೆಯೇ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು, ಹೊಸ ವಿಭಾಗಗಳು, ಹೊಸ ಶಾಲೆಗಳು, ಹೊಸ ಕೇಂದ್ರಗಳು, ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಕೋರ್ಸ್‌ಗಳು, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಉಪಕ್ರಮಗಳನ್ನು ಪರಿಚಯಿಸಬಹುದಾಗಿದೆ. ಜಂಟಿ ಸಂಶೋಧನಾ ಯೋಜನೆಗಳು, ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು, ಅಧ್ಯಾಪಕರ ವಿನಿಮಯಗಳು, ವಿದ್ಯಾರ್ಥಿ ವಿನಿಮಯ ಗಳು, ದ್ವಿ-ಪದವಿ ಕಾರ್ಯಕ್ರಮ, ಮುಂತಾದವುಗಳನ್ನು ನೀಡಲು ಈ ಸ್ಥಾನಮಾನ ಸಹಕಾರಿಯಾಗಲಿದೆ ಎಂದರು.

ಕುಲಸಚಿವ ಡಾ. ರೊನಾಲ್ಡ್ ನಜರೆತ್, ಕನ್ನಡ ವಿಭಾಗದ ಮುಖ್ಯಸ್ಥ ಡಾ. ದಿನೇಶ್ ನಾಯಕ್, ಪಿಆರ್‌ಒ ಚಂದ್ರಕಲಾ ನಾಯಕ್ ಇದ್ದರು.

*Varthabharathi 23-06-2026*

# ಅಲೋಶಿಯಸ್ ವಿವಿಗೆ ಯುಜಿಸಿ ಕೆಟಗರಿ-1 ಸ್ಥಾನಮಾನ

ಮಂಗಳೂರು, ಜೂ.22: ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯವು ಯುಜಿಸಿ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ-1 ಸ್ಥಾನಮಾನವನ್ನು ಪಡೆಯುವ ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ. ಈ ಸ್ಥಾನಮಾನ ಪಡೆದ ರಾಜ್ಯದ 2ನೇ ಖಾಸಗಿ ಪರಿಗಣಿತ ವಿವಿ ಎಂಬ ಹೆಗ್ಗಳಿಕೆ ಪಡೆದಿದೆ ಎಂದು ವಿವಿಯ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ತಿಳಿಸಿದ್ದಾರೆ.

ನಗರದ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಈ ಸಂತಸ ಹಂಚಿಕೊಂಡರು.

ಈ ಮಾನ್ಯತೆ ವಿಶ್ವವಿದ್ಯಾನಿಲಯದ 146 ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ, ನಾವೀನ್ಯ, ಸಂಶೋಧನೆ ಮತ್ತು ರಾಷ್ಟ್ರ ನಿರ್ಮಾಣದ ಅದ್ಭುತ ಪ್ರಯಾಣದಲ್ಲಿ ಒಂದು ನಿರ್ಣಾಯಕ ಹಂತವಾಗಿದೆ. ಭಾರತದಲ್ಲಿ ಪ್ರಸಕ್ತ 1,292 ವಿಶ್ವವಿದ್ಯಾನಿಲಯಗಳಿದ್ದು, ಅದರಲ್ಲಿರುವ 157 ಪರಿಗಣಿತ ವಿಶ್ವವಿದ್ಯಾನಿಲಯಗಳಲ್ಲಿ, ಕೇವಲ 26 ಸಂಸ್ಥೆಗಳು ಕೆಟಗರಿ-1 ಸ್ಥಾನಮಾನ ಗಳಿಸಿವೆ ಎಂದವರು ಹೇಳಿದರು.

ಸಂತ ಅಲೋಶಿಯಸ್ ವಿವಿಯು ಶೈಕ್ಷಣಿಕ ವ್ಯವಸ್ಥೆಯಲ್ಲಿ ಯುಜಿಸಿಯ ಶ್ರೇಣೀಕೃತ ಸ್ವಾಯತ್ತತೆ ಚೌಕಟ್ಟಿನಡಿಯಲ್ಲಿ ಕಲ್ಪಿಸಲಾದ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸಾಧಿಸಿದ್ದಕ್ಕಾಗಿ ಈ ಸ್ಥಾನಮಾನವನ್ನು ಪಡೆದಿದೆ. ಇದರಿಂದಾಗಿ ಪಠ್ಯಕ್ರಮ ವಿನ್ಯಾಸ, ಬೋಧನೆ-ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ನಾವೀನ್ಯ, ವಿದ್ಯಾರ್ಥಿಗಳ ಬೆಂಬಲ, ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಾಂಸ್ಥಿಕ ಮೌಲ್ಯಗಳು ಸೇರಿದಂತೆ ಉನ್ನತ ಶಿಕ್ಷಣದ ಎಲ್ಲ ಕ್ಷೇತ್ರಗಳಲ್ಲೂ ವಿಶೇಷತೆಗೆ ನೆರವಾಗಲಿದೆ.

ಯುಜಿಸಿ ನಿಯಮಗಳ ಅಡಿಯಲ್ಲಿ, ಕೆಟಗರಿ-1 ವಿಶ್ವವಿದ್ಯಾನಿಲಯಗಳು ಶೈಕ್ಷಣಿಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಸ್ವತಂತ್ರ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಲಿದೆ. ಯುಜಿಸಿಯಿಂದ ಪೂರ್ವಾನುಮೋದನೆ ಅಗತ್ಯವಿಲ್ಲದೆಯೇ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು, ಹೊಸ ವಿಭಾಗಗಳು, ಹೊಸ ಶಾಲೆಗಳು, ಹೊಸ ಕೇಂದ್ರಗಳು, ಡಿಪ್ಲೊಮಾ ಅಥವಾ ಸರ್ಟಿಫಿಕೆಟ್ ಕೋರ್ಸ್‌ಗಳು, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರ ಶಾಸ್ತ್ರೀಯ ಉಪ ಕ್ರಮಗಳನ್ನು ಪರಿಚಯಿಸಬಹುದಾಗಿದೆ. ಮಾತ್ರವಲ್ಲದೆ, ಜಂಟಿ ಸಂಶೋಧನಾ ಯೋಜನೆಗಳು, ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು, ಅಧ್ಯಾಪಕರ ವಿನಿಮಯಗಳು, ವಿದ್ಯಾರ್ಥಿ ವಿನಿಮಯಗಳು, ದ್ವಿ-ಪದವಿ ಕಾರ್ಯಕ್ರಮ ಇತ್ಯಾದಿಗಳನ್ನು ನೀಡಲು ಈ ಸ್ಥಾನಮಾನ ಸಹಕಾರಿಯಾಗಲಿದೆ ಎಂದು ರೆ.ಡಾ.ಪ್ರವೀಣ್ ಮಾರ್ಟಿಸ್ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ.ರೊನಾಲ್ಡ್ ನಝರೆತ್, ಕನ್ನಡ ವಿಭಾಗದ ಮುಖ್ಯಸ್ಥ ಡಾ.ದಿನೇಶ್ ನಾಯಕ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ನಾಯಕ್ ಉಪಸ್ಥಿತರಿದ್ದರು.

*Vijayavani 23-06-2026*

# ಸೇಂಟ್ ಅಲೋಶಿಯಸ್‌ಗೆ ಯುಜಿಸಿ ಕೆಟಗರಿ-1 ಸ್ಥಾನ

**ಮಂಗಳೂರು:** ಇಲ್ಲಿನ ಸೇಂಟ್ ಅಲೋಶಿಯಸ್ ವಿಶ್ವವಿದ್ಯಾಲಯ(ಪರಿಗಣಿತ ವಿಶ್ವವಿದ್ಯಾಲಯ ಡೀಮ್ಡ್ ಟು ಬಿಯೂನಿವರ್ಸಿಟಿ)ಧನವಿನಿಯೋಗಆಯೋಗ(ಯುಜಿಸಿ) ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ-1 ಸ್ಥಾನ ಪಡೆದಿದ್ದು, ಇದು ಸಂಸ್ಥೆಯ ಐತಿಹಾಸಿಕ ಸಾಧನೆ ಎಂದು ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್. ಜೆ. ತಿಳಿಸಿದರು.

**■ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಭಿಪ್ರಾಯ**

ದೇಶದಲ್ಲಿ 1,292 ವಿಶ್ವವಿದ್ಯಾಲಯಗಳಿದ್ದು, ಅದರಲ್ಲಿರುವ 157 ಪರಿಗಣಿತ ವಿಶ್ವವಿದ್ಯಾಲಯಗಳಲ್ಲಿ 26 ಸಂಸ್ಥೆಗಳು ಕೆಟಗರಿ-1 ಸ್ಥಾನ ಗಳಿಸಿದೆ. ಸೇಂಟ್ ಅಲೋಶಿಯಸ್ ವಿವಿ ಯುಜಿಸಿಯ ಶ್ರೇಣೀಕೃತ ಸ್ವಾಯತ್ತತೆ ಚೌಕಟ್ಟಿನಡಿ ಕಲ್ಪಿಸಲಾದ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸಾಧಿಸಿದಕ್ಕಾಗಿ ಈ ಸ್ಥಾನ ಸಿಕ್ಕಿದೆ. ಕರ್ನಾಟಕದಲ್ಲಿ 17 ಪರಿಗಣಿತ ವಿಶ್ವವಿದ್ಯಾಲಯಗಳಿದ್ದು, ಇದರಲ್ಲಿ 2 ವಿವಿಗಳು ಮಾತ್ರ ಕೆಟಗರಿ-1 ಸ್ಥಾನಮಾನ ಪಡೆದಿದೆ. ಅದರಲ್ಲಿ ಸೇಂಟ್ ಅಲೋಶಿಯಸ್ ವಿವಿಯೂ ಒಂದು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಶೈಕ್ಷಣಿಕ ಪಠ್ಯಕ್ರಮ ವಿನ್ಯಾಸ, ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ನಾವೀನ್ಯ, ವಿದ್ಯಾರ್ಥಿಗಳ ಬೆಂಬಲ, ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಾಂಸ್ಥಿಕ ಮೌಲ್ಯಗಳು ಸೇರಿದಂತೆ ಉನ್ನತ ಶಿಕ್ಷಣದ ಎಲ್ಲ ಆಯಾಮಗಳಲ್ಲಿ ಶ್ರೇಷ್ಠತೆಯನ್ನು ಅಳೆಯಲಾಗುತ್ತದೆ. ಯುಜಿಸಿ ನಿಯಮಗಳ ಅಡಿಯಲ್ಲಿ ಕೆಟಗರಿ-1 ವಿಶ್ವವಿದ್ಯಾಲಯಗಳು ಶೈಕ್ಷಣಿಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಗಣನೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತವೆ. ಅಂದರೆ ವಿಶ್ವವಿದ್ಯಾಲಯಗಳು ಯುಜಿಸಿಯಿಂದ ಪೂರ್ವಾನುಮೋದನೆ ಅಗತ್ಯವಿಲ್ಲದೆಯೇ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು, ಹೊಸ ವಿಭಾಗಗಳು, ಹೊಸ ಶಾಲೆಗಳು, ಹೊಸ ಕೇಂದ್ರಗಳು, ಡಿಪ್ಲೊಮಾ ಅಥವಾ ಸರ್ಟಿಫಿಕೆಟ್ ಕೋರ್ಸ್‌ಗಳು, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಉಪಕ್ರಮಗಳನ್ನು ತೆಗೆದುಕೊಳ್ಳಬಹುದು ಎಂದರು.

ಅಲೋಶಿಯಸ್ ವಿಶ್ವವಿದ್ಯಾಲಯ ಕುಲಸಚಿವ ಡಾ.ರೊನಾಲ್ಡ್ ನಜರೆತ್, ಕನ್ನಡ ವಿಭಾಗ ಮುಖ್ಯಸ್ಥ ದಿನೇಶ್, ಪಿಆರ್‌ಒ ಚಂದ್ರಕಲಾ ಸುದ್ದಿಗೋಷ್ಠಿಯಲ್ಲಿದ್ದರು.

*Vijaya Karnataka 23-06-2026*

# ಅಲೋಶಿಯಸ್ ವಿಶ್ವವಿದ್ಯಾಲಯಕ್ಕೆ ಯುಜಿಸಿ ಕೆಟಗರಿ-1 ಸ್ಥಾನಮಾನ

■ **ವಿಕ ಸುದ್ದಿಲೋಕ** ಮಂಗಳೂರು

ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳಡಿ ಪ್ರತಿಷ್ಠಿತ ಕೆಟಗರಿ-1 ಸ್ಥಾನಮಾನ ಪಡೆದು ಐತಿಹಾಸಿಕ ಮೈಲುಗಲ್ಲು ಸಾಧಿಸಿದೆ.

ವಿಶ್ವವಿದ್ಯಾಲಯದ 146 ವರ್ಷಗಳ ಶೈಕ್ಷಣಿಕವಾಗಿ ರಾಷ್ಟ್ರ ನಿರ್ಮಾಣಕ್ಕೆ ನೀಡಿದ ಕೊಡುಗೆ ಪರಿಗಣಿಸಿ ಯುಜಿಸಿ ಈ ಗೌರವಾನ್ವಿತ ಮಾನ್ಯತೆ ನೀಡಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕಳೆದ ಒಂದೂವರೆ ವರ್ಷಗಳಿಂದ ಈ ಮಾನ್ಯತೆಗಾಗಿ ಅಗತ್ಯವಿರುವ ಎಲ್ಲ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿತ್ತು. ವಿಶ್ವವಿದ್ಯಾಲಯದ ಶೈಕ್ಷಣಿಕ ಸಾಧನೆ, ಸಂಶೋಧನಾ ಕಾರ್ಯಕ್ಷಮತೆ, ಆಡಳಿತಾತ್ಮಕ ಗುಣಮಟ್ಟ ಹಾಗೂ ಸಾಂಸ್ಥಿಕ ಸಾಮರ್ಥ್ಯಗಳನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿದ ಬಳಿಕ ಯುಜಿಸಿ ಕೆಟಗರಿ-1 ಸ್ಥಾನಮಾನ ಮಂಜೂರು ಮಾಡಿದೆ. ಪ್ರಸ್ತುತ ಭಾರತದಲ್ಲಿ 1,292 ವಿಶ್ವವಿದ್ಯಾಲಯಗಳಿದ್ದು ಅವುಗಳಲ್ಲಿ 157 ಪರಿಗಣಿತ ವಿಶ್ವವಿದ್ಯಾಲಯಗಳಾಗಿವೆ. ಇವುಗಳಲ್ಲಿ ಕೇವಲ 26 ಸಂಸ್ಥೆಗಳು ಮಾತ್ರ ಕೆಟಗರಿ-1 ಸ್ಥಾನಮಾನ ಪಡೆದಿವೆ. ಈ ಮಾನ್ಯತೆಯು ಪಠ್ಯಕ್ರಮ ವಿನ್ಯಾಸ, ಬೋಧನೆ-ಕಲಿಕಾ ಪ್ರಕ್ರಿಯೆ, ಸಂಶೋಧನಾ ಉತ್ಪಾದಕತೆ, ಆಡಳಿತ ವ್ಯವಸ್ಥೆ, ಮೂಲಸೌಕರ್ಯ, ನಾವೀನ್ಯತೆ, ವಿದ್ಯಾರ್ಥಿ ಬೆಂಬಲ ಸೇವೆಗಳು, ಸಮುದಾಯ ತೊಡಗಿಸಿಕೊಳ್ಳುವಿಕೆ ಹಾಗೂ ಸಾಂಸ್ಥಿಕ ಮೌಲ್ಯಗಳಲ್ಲಿ ವಿಶ್ವವಿದ್ಯಾಲಯ ಸಾಧಿಸಿರುವ ಉನ್ನತ ಮಟ್ಟದ ಸಾಧನೆಯನ್ನು ಪ್ರತಿಬಿಂಬಿಸುತ್ತದೆ.

ಯುಜಿಸಿ ನಿಯಮಾವಳಿಗಳ ಪ್ರಕಾರ ಕೆಟಗರಿ-1 ವಿಶ್ವವಿದ್ಯಾಲಯಗಳಿಗೆ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಷಯಗಳಲ್ಲಿ ಹೆಚ್ಚಿನ ಸ್ವಾಯತ್ತತೆ ದೊರೆಯಲಿದೆ. ಇದರಡಿ ಯುಜಿಸಿಯ ಪೂರ್ವಾನುಮೋದನೆ ಪಡೆಯದೇ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು, ವಿಭಾಗಗಳು, ಶಾಲೆಗಳು, ಅಧ್ಯಯನ ಕೇಂದ್ರಗಳು, ಡಿಪ್ಲೊಮಾ ಮತ್ತು ಸರ್ಟಿಫಿಕೆಟ್ ಕೋರ್ಸ್‌ಗಳು, ಮುಕ್ತ ಹಾಗೂ ದೂರಶಿಕ್ಷಣ ಕಾರ್ಯಕ್ರಮಗಳು ಮತ್ತು ಅಂತರ್‌ಶಿಸ್ತೀಯ ಉಪಕ್ರಮಗಳನ್ನು ಆರಂಭಿಸಲು ಅವಕಾಶ ಸಿಗಲಿದೆ. ದೇಶ-ವಿದೇಶಗಳ ಶಿಕ್ಷಣ ಸಂಸ್ಥೆಗಳೊಂದಿಗೆ ಜಂಟಿ ಸಂಶೋಧನಾ ಯೋಜನೆಗಳು, ಸಹಯೋಗದ ಶೈಕ್ಷಣಿಕ ಕಾರ್ಯಕ್ರಮಗಳು, ಅಧ್ಯಾಪಕ ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು, ದ್ವಿಪದವಿ ಕೋರ್ಸ್‌ಗಳು ಸೇರಿದಂತೆ ನಾನಾ ಅಕಾಡೆಮಿಕ್ ಸಹಭಾಗಿತ್ವಗಳನ್ನು ಮತ್ತಷ್ಟು ವಿಸ್ತರಿಸಲು ಈ ಸ್ಥಾನಮಾನ ಸಹಕಾರಿಯಾಗಲಿದೆ ಎಂದರು.

ಕುಲಸಚಿವ ಡಾ.ರೊನಾಲ್ಡ್ ನಜರೆತ್, ಉಪನ್ಯಾಸಕ ಡಾ.ದಿನೇಶ್ ನಾಯಕ್ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ ಚಂದ್ರಕಲಾ ನಾಯಕ್ ಉಪಸ್ಥಿತರಿದ್ದರು.

*Times of India 23-06-2026*

# St Aloysius college gets UGC category-I status



**TOP-TIER:** Fr Praveen Martis, vice-chancellor of St Aloysius (Deemed-To-Be-University), addresses the media in Mangaluru Monday

TIMES NEWS NETWORK

**Mangaluru:** St Aloysius in city has become the second deemed-to-be university in Karnataka to secure the University Grants Commission (UGC) Category-I status.

Addressing the media, vice-chancellor Fr Praveen Martis said the recognition was conferred considering the institution's 146 years of service and recent progress. He said the status allows the university to introduce diploma, certificate and online programmes, and move beyond traditional courses into emerging areas such as AI.

He added that the autonomy enables easier international collaborations, including joint programmes, faculty exchange and student mobility, which were earlier not accessible. It also allows the university to connect with institutions like IITs, IIMs and other top institutions in the country, which was not possible earlier. The university received the recognition 1.5 years after applying, he said.

Granted under UGC Graded Autonomy Regulations, the status places it among a select group.

Of 1,292 universities, about 45 have this status; among 157 deemed universities, only 26 do.

Founded in 1880 by the Jesuits, the institution became a deemed university in Jan 2024. It has about 110 faculty members and 8,500 students, he said.

Registrar Ronald Nazareth, associate dean and Kannada HOD Dinesh Nayak, and PRO Chandrakala were present.

*Udayakala 23-06-2026*

# ಸಂತ ಅಲೋಶಿಯಸ್ ವಿವಿಗೆ ಯುಜಿಸಿ ಕೆಟಗರಿ-1 ಸ್ಥಾನಮಾನ

**ರಾಜ್ಯದ 2ನೇ ಖಾಸಗಿ ಪರಿಗಣಿತ ವಿವಿ ಎಂಬ ಹೆಗ್ಗಳಿಕೆ | ದೇಶದ ಕೇವಲ 26 ಸಂಸ್ಥೆಗಳ ಪಟ್ಟಿಗೆ ಸೇರ್ಪಡೆ**



**ಉದಯಕಾಲ ನ್ಯೂಸ್ ಮಂಗಳೂರು:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ಯುಜಿಸಿ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ-1 ಸ್ಥಾನಮಾನವನ್ನು ಪಡೆದು ಹೊಸ ಮೈಲಿಗಲ್ಲು ನಿರ್ಮಿಸಿದೆ. ಈ ಸ್ಥಾನಮಾನ ಪಡೆದ ರಾಜ್ಯದ ಎರಡನೇ ಖಾಸಗಿ ಪರಿಗಣಿತ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂತ ಅಲೋಶಿಯಸ್ ವಿಶ್ವವಿದ್ಯಾಲಯದ 146 ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ, ಸಂಶೋಧನೆ, ನಾವೀನ್ಯತೆ ಹಾಗೂ ರಾಷ್ಟ್ರ ನಿರ್ಮಾಣದ ಪಯಣಕ್ಕೆ ದೊರೆತ ಮಹತ್ವದ ಗೌರವ ಇದಾಗಿದೆ. ದೇಶದಲ್ಲಿರುವ 1,292 ವಿಶ್ವವಿದ್ಯಾಲಯಗಳಲ್ಲಿ 157 ಪರಿಗಣಿತ ವಿಶ್ವವಿದ್ಯಾಲಯಗಳಿದ್ದು, ಅವುಗಳಲ್ಲಿ ಕೇವಲ 26 ಸಂಸ್ಥೆಗಳು ಮಾತ್ರ ಕೆಟಗರಿ-1 ಸ್ಥಾನಮಾನ ಪಡೆದಿವೆ ಎಂದು ಅವರು ಮಾಹಿತಿ ನೀಡಿದರು.

ಈ ಸ್ಥಾನಮಾನದಿಂದ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಶೈಕ್ಷಣಿಕ ಸ್ವಾಯತ್ತತೆ ದೊರೆಯಲಿದ್ದು, ಯುಜಿಸಿಯ ಪೂರ್ವಾನುಮೋದನೆ ಇಲ್ಲದೇ ಹೊಸ ಪಠ್ಯಕ್ರಮಗಳು, ವಿಭಾಗಗಳು, ಶಾಲೆಗಳು, ಸಂಶೋಧನಾ ಕೇಂದ್ರಗಳು ಹಾಗೂ ಅಂತರಶಿಸ್ತೀಯ ಕಾರ್ಯಕ್ರಮಗಳನ್ನು ಆರಂಭಿಸಲು ಅವಕಾಶ ಸಿಗಲಿದೆ. ಜೊತೆಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಮತ್ತು ಸಂಶೋಧನಾ ಸಹಯೋಗಗಳಿಗೂ ಇದು ಬಲ ನೀಡಲಿದೆ ಎಂದು ಹೇಳಿದರು.

> **ಈ ಮಾನ್ಯತೆ ನಮ್ಮ 146 ವರ್ಷಗಳ ಶೈಕ್ಷಣಿಕ ಪಯಣಕ್ಕೆ ದೊರೆತ ಮಹತ್ವದ ಗೌರವವಾಗಿದೆ. ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದ ಶಿಕ್ಷಣ ಮತ್ತು ಸಂಶೋಧನಾ ಅವಕಾಶಗಳನ್ನು ಕಲ್ಪಿಸುವಲ್ಲಿ ಇದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಲಿದೆ.**
>
> । ರೆ. ಡಾ. ಪ್ರವೀಣ್ ಮಾರ್ಟಿಸ್, ಕುಲಪತಿ

ಯುಜಿಸಿ ನಿಯಮಾವಳಿಗಳ ಪ್ರಕಾರ, ಕೆಟಗರಿ-1 ವಿಶ್ವವಿದ್ಯಾಲಯಗಳು ಜಂಟಿ ಸಂಶೋಧನಾ ಯೋಜನೆಗಳು, ಅಧ್ಯಾಪಕರ ಹಾಗೂ ವಿದ್ಯಾರ್ಥಿಗಳ ವಿನಿಮಯ ಕಾರ್ಯಕ್ರಮಗಳು, ದ್ವಿಪದವಿ ಕೋರ್ಸ್‌ಗಳು ಸೇರಿದಂತೆ ವಿವಿಧ ಶೈಕ್ಷಣಿಕ ಉಪಕ್ರಮಗಳನ್ನು ಸುಲಭವಾಗಿ ಜಾರಿಗೆ ತರಲು ಸಾಧ್ಯವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ. ರೊನಾಲ್ಡ್ ನಜರೆತ್, ಕನ್ನಡ ವಿಭಾಗದ ಮುಖ್ಯಸ್ಥ ಡಾ. ದಿನೇಶ್ ನಾಯಕ್ ಹಾಗೂ ಪಿಆರ್‌ಒ ಚಂದ್ರಕಲಾ ನಾಯಕ್ ಉಪಸ್ಥಿತರಿದ್ದರು.

*Prajavani 25-06-2026*

# ಗ್ಲೋಬಲ್ ಡಿಗ್ರೀಸ್- ಅಲೋಶಿಯಸ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಂತರರಾಷ್ಟ್ರೀಯ ಶಿಕ್ಷಣ, ಜಾಗತಿಕ ತೊಡಗಿಸಿಕೊಳ್ಳುವಿಕೆ ಸಲಹಾ ಸಂಸ್ಥೆಯಾದ ಗ್ಲೋಬಲ್ ಡಿಗ್ರೀಸ್ ಸಂಸ್ಥೆಯು ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

ಇದರಿಂದ ಸೇಂಟ್ ಅಲೋಶಿಯಸ್ ವಿದ್ಯಾರ್ಥಿಗಳು, ಶಿಕ್ಷಕರಿಗೆ ಅಂತರ-ರಾಷ್ಟ್ರೀಯ ಶೈಕ್ಷಣಿಕ ಅವಕಾಶಗಳು ಲಭಿಸಲಿವೆ. ಗ್ಲೋಬಲ್ ಡಿಗ್ರೀಸ್ ಮಂಗಳೂರು ಸಂಸ್ಥೆಯ ಸಹ ಸಂಸ್ಥಾಪಕ ಶಿಜೊ ಮೋನ್ ಯೇಸುದಾಸ್ ಹಾಗೂ ಸೇಂಟ್ ಅಲೋಶಿಯಸ್ ವಿವಿ ಕುಲಪತಿ ಪ್ರವೀಣ್ ಮಾರ್ಟಿಸ್ ಒಪ್ಪಂದಕ್ಕೆ ಸಹಿ ಹಾಕಿದರು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.



ಗ್ಲೋಬಲ್ ಡಿಗ್ರೀಸ್ ಸಂಸ್ಥೆಯ ಶಿಜೊ ಮೋನ್ ಯೇಸುದಾಸ್ ಹಾಗೂ ಸೇಂಟ್ ಅಲೋಶಿಯಸ್ ಪರಿಗಣಿತ ವಿ.ವಿ ಕುಲಪತಿ ಪ್ರವೀಣ್ ಮಾರ್ಟಿಸ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು

*Samyktha Karnataka 28-06-2026*

# ಅಲೋಶಿಯಸ್: ಕನ್ನಡ ಎಂ.ಎ.ಗೆ ಹೊಸ ರೂಪ

ಸಂ.ಕ.ಸಮಾಚಾರ, ಮಂಗಳೂರು

ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯವು ಕನ್ನಡ ಸ್ನಾತಕೋತ್ತರ (ಎಂ.ಎ) ಪದವಿಗೆ ಹೊಸತನದ ರೂಪ ನೀಡಿದ್ದು, ವೃತ್ತಿಪರ ಕೋರ್ಸ್‌ನಂತೆ ಬದಲಾವಣೆ ಮಾಡಿಕೊಂಡಿದೆ. ಆಧುನಿಕ ಡಿಜಿಟಲ್ ಲೋಕದ ವಿವಿಧ ತಾಂತ್ರಿಕ ವಿಷಯಗಳನ್ನು ಪತ್ರದಲ್ಲಿ ಸೇರ್ಪಡೆಗೊಳಿಸಿ ಎಂಎ ಪದವಿಯನ್ನು ಇತರೇ ವೃತ್ತಿಪರ ಕೋರ್ಸ್‌ಗಳ ರೀತಿ ಮಾರ್ಪಡಿಸಿದೆ.

ಆ ಮೂಲಕ 10 ವರ್ಷಗಳಿಂದ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಹಳೆಕಾಲದ ಕನ್ನಡ ಎಂ.ಎ.ಪದವಿಗೆ ಅಲೋಶಿಯಸ್ ಕಾಲೇಜು ಹೊಸ ವಿನ್ಯಾಸವನ್ನು ನೀಡಿದೆ. ಕನ್ನಡ ಸಾಹಿತ್ಯ, ಪರಂಪರೆ, ಛಂದಸ್ಸಿಗೆ ಸೀಮಿತವಾಗಿದ್ದ ಕನ್ನಡ ಎಂಎ ಸ್ನಾತಕೋತ್ತರ ಪದವಿಗೆ ಬೇಡಿಕೆ ಕುಸಿಯುತ್ತಿರುವುದನ್ನು ಮನಗಂಡ ವಿಷಯ ತಜ್ಞರು ಇದೇ ಮೊದಲ ಬಾರಿಗೆ ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಪತ್ರಗಳನ್ನು ಮಾರ್ಪಡಿಸಿ ಆಧುನಿಕ ಕಾಲದ ಅಗತ್ಯ ಗಳನ್ನು ಪೂರೈಸುವಂತೆ ಹೊಸತನಕ್ಕೆ ತೆರೆದುಕೊಂಡಿದ್ದಾರೆ.

ಡಿಜಿಟಲ್ ಸಂವಹನ, ಸಿನಿಮಾ, ಕಿರುತೆರೆ ಸಹಿತ ಮನರಂಜನಾಉದ್ಯಮ ದಲ್ಲಿ ವೃತ್ತಿ ಕಂಡುಕೊಳ್ಳಲು ಸಾಧ್ಯವಾ ಗುವಂತೆ ಪದವಿ ಪತ್ರವನ್ನು ಬದಲಾವಣೆ ಮಾಡಲಾಗಿದೆ. ಇದಲ್ಲದೆ, ಮಾಧ್ಯಮ ಕ್ಷೇತ್ರದ ವಿವಿಧ ರಂಗಗಳಲ್ಲಿ ಬೇಡಿಕೆಯಿರುವ ಸಾಹಿತ್ಯ, ಅನುವಾದಗಳ ಜೊತೆಗೆ ಕೃತಕ ಬುದ್ಧಿಮತ್ತೆ ಪ್ರಾಂಪ್ಟ್ ಇಂಜಿನಿಯರಿಂಗ್, ಕಂಟೆಂಟ್ ಬರವಣಿಗೆ, ಸ್ಕ್ರಿಪ್ಟ್ ರಚನೆ, ಜಾಹೀರಾತು ಉದ್ಯಮ, ವೇದಿಕೆ ನಿರ್ವಹಣೆ ಮೊದಲಾದ ಕ್ಷೇತ್ರಗಳಲ್ಲಿ ಉದ್ಯೋಗ ಗಳಿಸಿಕೊಳ್ಳಲು ನೆರವಾಗುವಂತೆ ಎಂಎ ಪದವಿಯನ್ನು ಸಿದ್ಧಪಡಿಸಲಾಗಿದೆ.

ಇದಲ್ಲದೆ, ಕೆ.ಎ.ಎಸ್, ಐಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅನುವಾಗುವಂತೆ ಕನ್ನಡ ಸಾಹಿತ್ಯ, ಸಾಹಿತ್ಯ ಚರಿತ್ರೆ, ವಿಮರ್ಶೆ, ಜಾನಪದ, ಕಾವ್ಯಮೀಮಾಂಸೆ ಮೊದಲಾದ ಸಂಪ್ರದಾಯಿಕ ವಿಷಯಗಳನ್ನೂ ಪತ್ರದಲ್ಲಿ ಅಳವಡಿಸಲಾಗಿದೆ. ಪತ್ರಕ್ರಮ ರಚಿಸಲು ಬೆಂಗಳೂರು ಮತ್ತು ಮೈಸೂರಿನ ಕನ್ನಡ ಡಿಜಿಟಲ್ ಸಂವಹನ ವಿಭಾಗದ ಪರಿಣತರು, ಸಿನಿಮಾ ಕ್ಷೇತ್ರದ ತಜ್ಞರು, ಸಾಹಿತ್ಯ ವಿಮರ್ಶ ಕರನ್ನು ಒಳಗೊಂಡ ಅಧ್ಯಯನ ಮಂಡಳಿ ನೆರವು ಪಡೆಯಲಾಗಿದೆ. ಇದೇ 2026-27ನೇ ಸಾಲಿನಿಂದಲೇ ಕನ್ನಡ ಎಂ.ಎ. ಪ್ರೊಫೆಶನಲ್ ಕೋರ್ಸ್ ಆರಂಭವಾಗಲಿದ್ದು, ಇದು ಕನ್ನಡ ನಾಡಿಗೆ ಸಂತ ಅಲೋಶಿಯಸ್ ಪರಿಗಣಿತ ವಿ.ವಿ. ವಿನೂತನ ಕೊಡುಗೆಯೆಂದು ವಿವಿ ಕುಲಪತಿ ರೆ.ಡಾ.ಪ್ರವೀಣ್ ಮಾರ್ಟಿಸ್ ತಿಳಿಸಿದ್ದಾರೆ.

*Hindi Sagar 29-06-2026*

# एक दिवसीय अतिथि व्याख्यान कार्यक्रम का आयोजन

### हिंदी सामाजिक, आर्थिक और सांस्कृतिक विकास की सशक्त भाषा है :डॉ. बालमुरुगन

मंगळूरु, कर्नाटक ड्ड संत अलोशियस (मानित विश्वविद्यालय), मंगळूरु के हिंदी विभाग तथा बैंक ऑफ बड़ौदा, आंचलिक कार्यालय, मंगळूरु के संयुक्त तत्वावधान में दिनांक 25 जून 2026 को बैंकिंग जागरूकता एवं राजभाषा विषय पर एक दिवसीय अतिथि व्याख्यान कार्यक्रम का आयोजन किया गया।



कार्यक्रम के प्रथम तकनीकी सत्र में बैंकिंग जागरूकता पर चर्चा हुई। इस अवसर पर बैंक ऑफ बड़ौदा के अधिकारी श्री के. राजेश कुमार, श्री विकास सिंह एवं श्री लाल जी साहु ने विद्यार्थियों को आधुनिक बैंकिंग प्रणाली, डिजिटल सेवाओं की सुविधा एवं सुरक्षा, तथा वित्तीय समावेशन की आवश्यकता पर प्रकाश डाला। उन्होंने बताया कि बैंकिंग सेवाओं का विस्तार समाज के हर वर्ग तक पहुँचना आर्थिक विकास के लिए अत्यंत आवश्यक है।

द्वितीय तकनीकी सत्र में राजभाषा हिंदी की भूमिका पर विचार प्रस्तुत किए गए। बैंक ऑफ बड़दा के राजभाषा अधिकारी डॉ. बालमुरुगन ने कहा कि हिंदी केवल प्रशासनिक भाषा नहीं, बल्कि सामाजिक, आर्थिक और सांस्कृतिक विकास का भी सशक्त साधन है। उन्होंने विद्यार्थियों को वित्तीय एवं भाषाई दक्षता विकसित करने के लिए प्रेरित किया। कार्यक्रम में डॉ. संध्या सिर्सिकर ने स्वागत भाषण दिया, कु. आशा पटेल ने संचालन किया तथा डॉ. महबूबअली अ. नदाफ ने धन्यवाद ज्ञापन प्रस्तुत किया। लगभग 200 प्रतिभागियों की उपस्थिति ने इस कार्यक्रम को सफल बनाया। यह अतिथि व्याख्यान विद्यार्थियों के लिए अत्यंत ज्ञानवर्धक एवं प्रेरणादायक सिद्ध हुआ, जिसने शिक्षा जगत और बैंकिंग क्षेत्र के बीच सहयोग को और अधिक सुदृढ़ बनाया।

*Prajavani 28-06-2026*

# ಕರ್ನಲ್ ಕಮಾಂಡೆಂಟ್ ಆಗಿ ಪ್ರವೀಣ್ ಮಾರ್ಟಿಸ್



ಪ್ರವೀಣ್ ಮಾರ್ಟಿಸ್

ಮಂಗಳೂರು: ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕುಲಪತಿ ಪ್ರವೀಣ್ ಮಾರ್ಟಿಸ್ ಅವರನ್ನು ಕೇಂದ್ರ ಸರ್ಕಾರದ ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್‌ನಲ್ಲಿ (ಎನ್‌ಸಿಸಿ) ಗೌರವ ಕರ್ನಲ್ ಹುದ್ದೆ 'ಕರ್ನಲ್ ಕಮಾಂಡೆಂಟ್' ಆಗಿ ನೇಮಕ ಮಾಡಲಾಗಿದೆ.

ಎನ್.ಸಿ.ಸಿ. ಪ್ರಧಾನ ಕಚೇರಿ, ಮಂಗಳೂರು ಗ್ರೂಪ್‌ನವರು ಪ್ರವೀಣ್ ಮಾರ್ಟಿಸ್ ಅವರನ್ನು ಈ ಗೌರವಕ್ಕೆ ಶಿಫಾರಸು ಮಾಡಿದ್ದರು. ಈ ವಿಶಿಷ್ಟ ರಾಷ್ಟ್ರೀಯ ಮನ್ನಣೆ ನೀಡಿರುವ ಕುರಿತು ಭಾರತದ ರಾಜ್ಯಪತ್ರದಲ್ಲಿ ಮೇ 2ರಂದು ಪ್ರಕಟಿಸಲಾಗಿದೆ. ಜುಲೈ ತಿಂಗಳಲ್ಲಿ ಭಾರತೀಯ ಸಶಸ್ತ್ರ ಪಡೆಗಳ ಹಿರಿಯ ಅಧಿಕಾರಿಗಳಿಂದ (ಎನ್‌ಸಿಸಿ ಅಧಿಕಾರಿಗಳು) ಅವರು ಈ ಗೌರವ ಸ್ವೀಕರಿಸಲಿದ್ದಾರೆ ಎಂದು ಸೇಂಟ್ ಅಲೋಶಿಯಸ್ ಶಿಕ್ಷಣ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

*Udayavani 30-06-2026*

# 'ನುಡಿ ಚಮ್ಮಾಳಿಗೆ' ಕೃತಿ ಬಿಡುಗಡೆ



**ಮಹಾನಗರ, ಜೂ.29:** ವಿಕಾಸ್ ಆರ್. ಮೌರ್ಯ ಅವರು ಕನ್ನಡಕ್ಕೆ ಅನುವಾದಿಸಿರುವ, ತೆಲುಗು ಸಾಹಿತಿ ಎಂಡ್ಲೂರಿ ಸುಧಾಕರ್ ಅವರ ಕೃತಿ 'ನುಡಿ ಚಮ್ಮಾಳಿಗೆ'ಯನ್ನು ನಗರದ ಸಂತ ಅಲೋಶಿಯಸ್ ಪರಿಗಣಿತ ವಿವಿ ಕಾಲೇಜಿನ ಸಹೋದಯ ಆವರಣದಲ್ಲಿ ಜೀರುಂಡೆ ಪ್ರಕಾಶನ, ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಹಯೋಗದೊಂದಿಗೆ ರವಿವಾರ ಜರಗಿದ ಸಮಾರಂಭದಲ್ಲಿ ಮೂಲ್ಕಿಸರಕಾರಿಪದವಿಪೂರ್ವಕಾಲೇಜಿನ ಪ್ರಾಂಶುಪಾಲ ಡಾ| ವಾಸುದೇವ ಬೆಳ್ಳೆ ಅವರು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿಮಾತನಾಡಿದ ಡಾ| ವಾಸುದೇವ ಬೆಳ್ಳೆ ಅವರು, ಈ ಕೃತಿಯನ್ನು ಗ್ರಾಮ್ಯ ಭಾಷೆಯಲ್ಲಿ ಅನುವಾದಿಸಲಾಗಿದೆ. ನಿರ್ಲಕ್ಷ್ಯಕ್ಕೆ ಒಳಗಾದ ಮಾದಿಗ ಸಮುದಾಯದ ದಮನಿತ ನುಡಿಗಳು, ಮಾದಿಗ ಸಾಂಸ್ಕೃತಿಕ ಲೋಕದ ಚರಿತ್ರೆ ಈ ಕೃತಿಯಲ್ಲಿ ಇದೆ ಎಂದು ಹೇಳಿದರು.

ಸಾಹಿತಿ ಅತ್ರಾಡಿ ಅಮೃತ ಶೆಟ್ಟಿ ಅವರು ಕೃತಿಯ ಬಗ್ಗೆ ಮಾತನಾಡಿದರು. ಸಂತ ಅಲೋಶಿಯಸ್ ಪರಿಗಣಿತ ವಿವಿ ಕನ್ನಡ ವಿಭಾಗದ ಮುಖ್ಯಸ್ಥ ಡಾ| ದಿನೇಶ್ ನಾಯಕ್ ಮುಖ್ಯ ಅತಿಥಿಯಾಗಿದ್ದರು. ಕೃತಿಯ ಅನುವಾದಕ ವಿಕಾಸ್ ಆರ್. ಮೌರ್ಯ, ಜೀರುಂಡೆ ಪುಸ್ತಕ ಪ್ರಕಾಶನದ ಧನಂಜಯ ಎನ್ ಉಪಸ್ಥಿತರಿದ್ದರು. ಎಚ್.ಎಂ. ಪೆರ್ನಾಲ್ ಸ್ವಾಗತಿಸಿದರು. ಫಾತಿಮಾ ರಲಿಯಾ ನಿರೂಪಿಸಿದರು.

*Udayavani 30-06-2026*

# ಆಲೋಶಿಯಸ್ ವಿವಿಗೆ ಯುಜಿಸಿ ಕೆಟಗರಿ-1 ಸ್ಥಾನ

**ಉರ್ವ, ಜೂ.29:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯವು ಯುಜಿಸಿ ಶ್ರೇಣೀಕೃತ ಸ್ವಾಯತ್ತತೆ ನಿಯಮಗಳ ಅಡಿಯಲ್ಲಿ ಪ್ರತಿಷ್ಠಿತ ಕೆಟಗರಿ-1 ಸ್ಥಾನಮಾನವನ್ನು ಪಡೆಯುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ. ಈ ಸ್ಥಾನಮಾನ ಪಡೆದ ರಾಜ್ಯದ 2ನೇ ಖಾಸಗಿ ಪರಿಗಣಿತ ವಿವಿ ಎಂಬ ಹೆಗ್ಗಳಿಕೆಯನ್ನು ಪಡೆದಿದೆ ಎಂದು ವಿವಿಯ ಕುಲಪತಿ ರೆ। ಡಾ। ಪ್ರವೀಣ್ ಮಾರ್ಟಿಸ್ ತಿಳಿಸಿದ್ದಾರೆ.

ಪತ್ರಿಕಾಭವನದಲ್ಲಿನಡೆದ ಪತ್ರಿಕಾಗೋಷ್ಠಿಯಲ್ಲಿಮಾತನಾಡಿದ ಅವರು, ಈ ಮಾನ್ಯತೆ ಸಂಸ್ಥೆಯ 146 ವರ್ಷಗಳ ಶೈಕ್ಷಣಿಕ ಶ್ರೇಷ್ಠತೆ, ಹೊಸತನ, ಸಂಶೋಧನೆ ಮತ್ತು ರಾಷ್ಟ್ರ ನಿರ್ಮಾಣದ ಅದ್ಭುತ ಪ್ರಯಾಣದಲ್ಲಿಒಂದು ನಿರ್ಣಾಯಕ ಹಂತವಾಗಿದೆ. ಭಾರತದಲ್ಲಿ ಪ್ರಸ್ತುತ 1,292 ವಿಶ್ವವಿದ್ಯಾಲಯಗಳಿದ್ದು, ಅದರಲ್ಲಿರುವ 157 ಪರಿಗಣಿತ ವಿಶ್ವವಿದ್ಯಾಲಯಗಳಲ್ಲಿ, ಕೇವಲ 26 ಸಂಸ್ಥೆಗಳು ಕೆಟಗರಿ-1 ಸ್ಥಾನಮಾನವನ್ನು ಗಳಿಸಿವೆ. ಸಂತ ಅಲೋಶಿಯಸ್ ವಿವಿಯು ಶೈಕ್ಷಣಿಕ ವ್ಯವಸ್ಥೆಯಲ್ಲಿ ಯುಜಿಸಿಯ ಶ್ರೇಣೀಕೃತ ಸ್ವಾಯತ್ತತೆ ಚೌಕಟ್ಟಿನಡಿಯಲ್ಲಿ ಕಲ್ಪಿಸಲಾದ ಶೈಕ್ಷಣಿಕ ಗುಣಮಟ್ಟ ಮತ್ತು ಸಾಂಸ್ಥಿಕ ಶ್ರೇಷ್ಠತೆಯ ಅತ್ಯುನ್ನತ ಮಾನದಂಡಗಳನ್ನು ಸಾಧಿಸಿದ್ದಕ್ಕಾಗಿ ಈ ಸ್ಥಾನಮಾನ ಪಡೆದಿದೆ. ಇದರಿಂದಾಗಿ ಪಠ್ಯಕ್ರಮ ವಿನ್ಯಾಸ, ಬೋಧನೆ-ಕಲಿಕಾ ಪ್ರಕ್ರಿಯೆಗಳು, ಸಂಶೋಧನಾ ಉತ್ಪಾದಕತೆ, ಆಡಳಿತ, ಮೂಲಸೌಕರ್ಯ, ಸಮುದಾಯ ತೊಡಗಿಸಿಕೊಳ್ಳುವಿಕೆ ಮತ್ತು ಸಾಂಸ್ಥಿಕ ಮೌಲ್ಯಗಳು ಸೇರಿದಂತೆ ಉನ್ನತ ಶಿಕ್ಷಣದ ಎಲ್ಲ ಕ್ಷೇತ್ರಗಳಲ್ಲೂ ವಿಶೇಷತೆಗೆ ನೆರವಾಗಲಿದೆ ಎಂದರು.

ಕುಲಸಚಿವ ಡಾ। ರೊನಾಲ್ಡ್ ನಜರೆತ್ ಮಾತನಾಡಿ, ಯುಜಿಸಿ ನಿಯಮಗಳ ಅಡಿಯಲ್ಲಿ, ವಿಶ್ವವಿದ್ಯಾಲಯಗಳು ಸ್ವಯಂ ಶೈಕ್ಷಣಿಕ ನಿರ್ಧಾರ ತೆಗೆದುಕೊಳ್ಳಲು ಮತ್ತು ಸಾಂಸ್ಥಿಕ ಅಭಿವೃದ್ಧಿಯಲ್ಲಿ ಸ್ವತಂತ್ರವಾಗಿ ಭಾಗವಹಿಸಲು ಕೆಟಗರಿ-1 ಅವಕಾಶ ಕಲ್ಪಿಸಲಿದೆ. ಯುಜಿಸಿಯಿಂದ ಪೂರ್ವಾನುಮೋದನೆ ಇಲ್ಲದೆ ಹೊಸ ಶೈಕ್ಷಣಿಕ ಕಾರ್ಯಕ್ರಮ, ಹೊಸ ವಿಭಾಗ, ಹೊಸ ಕೇಂದ್ರ, ಡಿಪ್ಲೊಮಾ ಅಥವಾ ಸರ್ಟಿಫಿಕೇಟ್ ಕೋರ್ಸ್, ಮುಕ್ತ ಮತ್ತು ದೂರಶಿಕ್ಷಣ ವಿಭಾಗಗಳು ಮತ್ತು ಅಂತರಶಿಸ್ತೀಯ ಉಪಕ್ರಮ ಪರಿಚಯಿಸಬಹುದು. ಮಾತ್ರವಲ್ಲದೆ, ಜಂಟಿ ಸಂಶೋಧನ ಯೋಜನೆ, ಸಹಯೋಗದ ಶೈಕ್ಷಣಿಕ ಕಾರ್ಯಕ್ರಮ, ಅಧ್ಯಾಪಕರ ವಿನಿಮಯ, ವಿದ್ಯಾರ್ಥಿ ವಿನಿಮಯ, ದ್ವಿ-ಪದವಿ ಕಾರ್ಯಕ್ರಮ ಮುಂತಾದವುಗಳನ್ನು ನೀಡಲು ಇದರಿಂದ ಸಹಕಾರಿಯಾಗಲಿದೆ ಎಂದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ। ದಿನೇಶ್ ನಾಯಕ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಚಂದ್ರಕಲಾ ನಾಯಕ್ ಉಪಸ್ಥಿತರಿದ್ದರು.

*Samyuktha Karnataka 30-06-2026*

# ಸಂತ ಅಲೋಯ್ಸಿಯಸ್: ಪದವಿಗೆ ಹಿಂದಿ ಮೇಜರ್ ವಿಷಯ ಆರಂಭ

**ಸಂ.ಕ.ಸಮಾಚಾರ, ಮಂಗಳೂರು**

ಭಾರತೀಯ ಭಾಷೆಗಳ ಅಧ್ಯಯನಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಮಂಗಳೂರಿನ ಸಂತ ಅಲೋಯ್ಸಿಯಸ್ ವಿಶ್ವವಿದ್ಯಾಲಯವು 2026-27ನೇ ಶೈಕ್ಷಣಿಕ ವರ್ಷದಿಂದ ಪದವಿ ಹಂತದಲ್ಲಿ ಹಿಂದಿ ಮೇಜರ್ ವಿಷಯ ಆರಂಭಗೊಂಡಿದೆ.

ಹಿಂದಿ ವಿಭಾಗದ ಮೂಲಕ ಆರಂಭವಾಗುತ್ತಿರುವ ಈ ಕೋರ್ಸ್‌ನಲ್ಲಿ ಹಿಂದಿ ಭಾಷೆ, ಸಾಹಿತ್ಯ, ಅನುವಾದ ಅಧ್ಯಯನ, ಮಾಧ್ಯಮ ಮತ್ತು ಸಂವಹನ, ಸೃಜನಾತ್ಮಕ ಬರವಣಿಗೆ ಹಾಗೂ ಭಾರತೀಯ ಸಾಹಿತ್ಯ ಪರಂಪರೆಯ ಕುರಿತ ಸಮಗ್ರ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಹಿಂದಿ ಮೇಜರ್ ಜೊತೆಗೆ ಅರ್ಥಶಾಸ್ತ್ರ, ಇತಿಹಾಸ, ಮನೋವಿಜ್ಞಾನ, ಸಮಾಜಶಾಸ್ತ್ರ ಹಾಗೂ ಮಾಧ್ಯಮ ಮತ್ತು ಸಂವಹನ ವಿಷಯಗಳನ್ನು ಅಧ್ಯಯನ ಮಾಡಬಹುದಾಗಿದೆ.

ವಿಶ್ವವಿದ್ಯಾಲಯದ ಅಧಿಕಾರಿಗಳ ಪ್ರಕಾರ, ಹಿಂದಿ ದೇಶದ ಪ್ರಮುಖ ಸಂಪರ್ಕ ಭಾಷೆಯಾಗಿದ್ದು, ಶಿಕ್ಷಣ, ಸಂಶೋಧನೆ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ವಿಶಾಲ ಅವಕಾಶಗಳನ್ನು ಹೊಂದಿದೆ. ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ, ಸಂವಹನ ಕೌಶಲ್ಯ ಹಾಗೂ ಉದ್ಯೋಗಾರ್ಹತೆಯನ್ನು ಹೆಚ್ಚಿಸುವ ರೀತಿಯಲ್ಲಿ ಪಠ್ಯಕ್ರಮವನ್ನು ರೂಪಿಸಲಾಗಿದೆ.

ಈ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ರಾಜಭಾಷಾ ಅಧಿಕಾರಿ, ಅನುವಾದಕ, ಪತ್ರಕರ್ತ, ಮಾಧ್ಯಮ ವೃತ್ತಿಪರ, ನಿರೂಪಕ, ಪ್ರವಾಸಿ ಮಾರ್ಗದರ್ಶಕ, ಶಿಕ್ಷಕ, ಸಂಶೋಧಕ ಹಾಗೂ ವಿಷಯ ಬರಹಗಾರರಾಗಿ ವಿವಿಧ ಕ್ಷೇತ್ರಗಳಲ್ಲಿ ವೃತ್ತಿಜೀವನ ರೂಪಿಸಿಕೊಳ್ಳಬಹುದು. ದೂರದರ್ಶನ, ರೇಡಿಯೋ ಹಾಗೂ ಇತರೆ ಸಂಸ್ಥೆಗಳಲ್ಲಿ ಇಂಟರ್ನ್‌ಶಿಪ್ ಅವಕಾಶಗಳನ್ನೂ ವಿಶ್ವವಿದ್ಯಾಲಯ ಒದಗಿಸುತ್ತಿದೆ.

ಇದಲ್ಲದೆ, NET, SET ಹಾಗೂ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಅಗತ್ಯವಾದ ವಿಶೇಷ ಮಾರ್ಗದರ್ಶನವನ್ನು ಹಿಂದಿ ವಿಭಾಗ ನೀಡಲಿದೆ ಎಂದು ತಿಳಿಸಲಾಗಿದೆ.

2026-27ನೇ ಸಾಲಿನ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಆಸಕ್ತ ವಿದ್ಯಾರ್ಥಿಗಳು ಸಂತ ಅಲೋಯ್ಸಿಯಸ್ ವಿಶ್ವವಿದ್ಯಾಲಯದ ಹಿಂದಿ ವಿಭಾಗವನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

## Digital News Links

1. ಅಲೋಶಿಯಸ್ ವಿವಿ ಗೆ **DASCA** ಪ್ರತಿಷ್ಠಿತ ಮಾನ್ಯತೆ
https://www.upayuktha.com/2026/06/St-Aloysius-University-Achieves-Prestigious-DASCA-Accreditation.html
2. St Aloysius University achieves prestigious DASCA Accreditation
https://www.daijiworld.com/news/newsDisplay?newsID=1316289
3. Awareness Talk on 'Our Coastal Ecosystems – Conservation of its Flora and Fauna' Held at St Aloysius Pre-University College
https://konkantimes.com/awareness-talk-on-our-coastal-ecosystems-conservation-of-its-flora-and-fauna-held-at-st-aloysius-pre-university-college/
4. Awareness programme on protection of coastal flora, fauna held at St Aloysius PU College
https://www.daijiworld.com/news/newsDisplay?newsID=1316744
5. Mangaluru: St Aloysius University celebrates World Environment Day
https://www.daijiworld.com/news/newsDisplay?newsID=1316742
6. St Aloysius PU College inspires students through series of expert sessions
https://www.daijiworld.com/news/newsDisplay?newsID=1316759
7. Mangaluru: St Aloysius University celebrates World Environment Day
https://daijiworld.com/news/newsDisplay?newsID=1316742
8. ದೇಶದಲ್ಲೇ ಪ್ರಥಮ ಬಾರಿ: ಎಐ ಮತ್ತು ಡಿಜಿಟಲ್ ಕೌಶಲಗಳೊಂದಿಗೆ 'ಕನ್ನಡ ಎಂ.ಎ. ಪ್ರೊಫೆಷನಲ್' ಕೋರ್ಸ್ ಆರಂಭಿಸಿದ ಸಂತ ಅಲೋಶಿಯಸ್
https://kannada.oneindia.com/news/karnataka/st-aloysius-mangaluru-launches-innovative-ma-kannada-professional-course-with-ai-and-digital-skills-456359.html#google_vignette
9. ದೇಶದಲ್ಲೇ ಪ್ರಥಮ ಬಾರಿ ಎಐ ಮತ್ತು ಡಿಜಿಟಲ್ ಕೌಶಲಗಳೊಂದಿಗೆ ಕನ್ನಡ ಎಂ.ಎ. ಪ್ರೊಫೆಷನಲ್ ಕೋರ್ಸ್ ಆರಂಭಿಸಿದ ಮಂಗಳೂರಿನ ಸಂತ ಅಲೋಶಿಯಸ್
https://news19kannada.com/for-the-first-time-in-the-country-mangalores-saint-aloysius-launches-kannada-m-a-professional-course-with-ai-and-digital-skills/
10. ಮಂಗಳೂರಿನ ಸೇಂಟ್ ಅಲೋಶಿಯಸ್ ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಗೆ ಹೊಸ ಸ್ವರೂಪ
https://www.prajavani.net/district/dakshina-kannada/mangaluru-kannada-ma-course-new-design-st-aloysius-university-4057940?utm_source=whatsapp&utm_medium=referral&utm_campaign=socialshare
11. Remona Evette Pereira Selected as Doordarshan B-Grade Classical Dance Artist
https://www.mangalorean.com/remona-evette-pereira-selected-as-doordarshan-b-grade-classical-dance-artist/
12. Rev Dr Praveen Martis SJ Vice Chancellor St Aloysius University | Luminaries at Milagres College
https://www.youtube.com/watch?v=jlZytg0fez0

13. ಶಿಕ್ಷಣ! ಕನ್ನಡ ಅಧ್ಯಯನಕ್ಕೆ ಹೊಸ ಮೆರುಗು
https://www.prajavani.net/education-career/education/mangaluru-kannada-postgraduate-new-syllabus-aloysius-4074928
14. St Aloysius becomes second deemed university in state to achieve UGC Category-I status
https://www.daijiworld.com/news/newsDisplay?newsID=1317919
15. UGC grants Category-I status to St. Aloysius University
https://www.thehindu.com/news/cities/Mangalore/ugc-grants-category-i-status-to-st-aloysius-university/article71132767.ece
16. Global Degrees Mangalore Signs MoU with St Aloysius Deemed to be University, Mangalore
https://pingara.com/kannada-news/global-degrees-mangalore-signs-mou-with-st-aloysius-deemed-to-be-university-mangalore/#google_vignette
17. St Aloysius (Deemed to be University ) becomes the 2nd deemed university in the state of Karnataka
https://www.youtube.com/watch?v=oFzQFJg0mSU
18. St Aloysius University Vice Chancellor Conferred Honorary Rank of Colonel Commandant by Government of India
https://konkantimes.com/st-aloysius-university-vice-chancellor-conferred-honorary-rank-of-colonel-commandant-by-government-of-india/
19. International Actor Ben Francisco Experiences the Spirit of St Aloysius College Mangaluru
https://catholicconnect.in/news/international-actor-ben-francisco-experiences-the-spirit-of-st-aloysius-college-mangaluru
20. ಅಲೋಶಿಯಸ್ ವಿ ವಿ ಕುಲಪತಿಯವರಿಗೆ ಕರ್ನಲ್ ಕಮಾಂಡೆಂಟ್ ಗೌರವ ಪ್ರಶಸ್ತಿ
https://www.upayuktha.com/2026/06/aloysius-university-vice-chancellor-receives-colonel-commandant-honor-award.html
21. St Aloysius University VC Dr Praveen Martis conferred honorary rank of colonel Commandant
https://www.daijiworld.com/news/newsDisplay?newsID=1318306
22. एक दविसीय अतथिि व्याख्यान कार्यक्रम का आयोजन
https://epaper.hindsagarplk.com/news/34637/6a4176cb38e6f

**Dear User,**

**We invite you to visit** https://digitallibrary.staloysius.edu.in **to access the archives of news clippings related to our University. The archive serves as a valuable repository of media coverage, documenting important events, accomplishments, and developments of the University.**